ಜನಪದ ವಿಚಾರ

ಬೆಲೆ : ರೂ ೨೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೭ ಫೆಬ್ರವರಿ -೨೦೧೭ ಸಂಚಿಕೆ - ೭

ಚಂಪಾರಣ್ಯ ಸತ್ಯಾಗ್ರಹ ಮತ್ತು ವರ್ತಮಾನ

*

ಗಾಂಧೀಯ ಗುಡಿಸಲಿನ ದಿವ್ಯ ಸಂದೇಶ

*

ಸಾಮ್ಯ ಯೋಗ ಇಂದಿನ ಯುಗದ ಬ್ರಹ್ಮ

ಜನಪದ ವಿಚಾರದಲ್ಲಿ

ಫೆಬ್ರವರಿ – ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಫೆಬ್ರವರಿ - ೨೦೧೬
ಸಂಪುಟ - ೧೭
ಸಂಚಿಕೆ - ೭

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಪ್ರಾರ್ಥನೆ

ನಿನ್ನ ಬಾಂದಳದಂತೆ
ನನ್ನ ಮನವಿರಲಿ;
ನಿನ್ನ ಸಾಗರದಂತೆ
ನನ್ನ ಎದೆಯಿರಲಿ.

ನಿನ್ನ ಸುಗ್ಗಿಯ ತೆರದಿ
ನನ್ನ ಸೊಬಗಿರಲಿ;
ನಿನ್ನ ಲೀಲೆಯ ತೆರದಿ
ನನ್ನ ಬಾಳಿರಲಿ.

ನಿನ್ನ ಬಲವಿರುವಂತೆ
ನನ್ನ ಬಲವಿರಲಿ;
ನಿನ್ನ ತಿಳಿವಿರುವಂತೆ
ನನ್ನ ತಿಳಿವಿರಲಿ.

ನಿನ್ನೊಲ್ಮೆಯಂದದಲಿ
ನನ್ನೊಲ್ಮೆಯಿರಲಿ;
ನಿನ್ನಾಳವೆನಗಿರಲಿ.
ನೀನೆ ನನಗಿರಲಿ.

ನಿನ್ನಾತ್ಮದಾನಂದ
ನನ್ನದಾಗಿರಲಿ;
ನಿನ್ನೊಳಿರುವಾ ಶಾಂತಿ
ನನ್ನೆದೆಗೆ ಬರಲಿ.

ಕುವೆಂಪು....

ಚಿಂತನೆಗೊಂದು ಸಂಗತಿ

ಕ್ರೌರ್ಯದ ವೈಭವೀಕರಣ

ಇತ್ತೀಚೆಗೆ ಸಮಾಜದಲ್ಲಿ ಮನುಷ್ಯನ ಕ್ರೌರ್ಯಸ್ವಭಾವದ ವೈಭವೀಕರಣ ವಾಗುತ್ತಿದೆ. ಕೊಲೆಗಳೂ, ಯುದ್ಧಗಳೂ ಕ್ರೌರ್ಯದ ಮುಖವೇ. ಕೊಲೆಯ ಘಟನೆಗಳನ್ನು ಮಾಧ್ಯಮಗಳು ವೈಭವೀಕರಿಸುವುದು ಸಾಮಾನ್ಯವಾಗಿದೆ. ಆ ಬಗ್ಗೆ ಪತ್ರಿಕೆಗಳಲ್ಲಿ ವಿವರಣೆ ಬರುವುದು, ದೂರದರ್ಶನದಲ್ಲಿ ಚಿತ್ರ ಸಮೇತ ಬಿತ್ತರಗೊಳ್ಳುವುದು ಕೂಡ ಸರ್ವೆಸಾಮಾನ್ಯ ವಾಗಿದೆ. ಪದೆಪದೆ ಅಂಥ ಚಿತ್ರಗಳನ್ನು ನೋಡುವುದರಿಂದ ಹಾಗೂ ಓದುವುದರಿಂದ ಶಾಂತವಾದ ಮನಸ್ಸು ಕೂಡ ಅಶಾಂತಗೊಳ್ಳುತ್ತದೆ. ಸೇಡುತೀರಿಸಿಕೊಳ್ಳುವ ಮನೋಭಾವವುಳ್ಳ ವವರಿಗೆ ಅವು ಕ್ರೌರ್ಯಕ್ಕೆ ಪ್ರೋತ್ಸಾಹಿಸುತ್ತವೆ. ಚಲನಚಿತ್ರಗಳಲ್ಲಿ ಸಹ ಕೊಲೆ-ಸುಲಿಗೆಯಂಥ ಕ್ರೌರ್ಯದ ಘಟನೆಗಳಿರುತ್ತವೆ. ರಾಜಕೀಯ ಸಮಾರಂಭಗಳಲ್ಲಿ ತಮ್ಮ ನೆಚ್ಚಿನ ನಾಯಕ ಅಥವಾ ನಾಯಕಿಗೆ ಗದೆಯನ್ನೊ, ಬಿಲ್ಲುಬಾಣವನ್ನೋ, ಬಿಚ್ಚುಗತ್ತಿಯನ್ನೋ ಕೊಟ್ಟು ಸನ್ಮಾನಿಸುತ್ತಾರೆ. ಗದೆ, ಬಿಚ್ಚುಗತ್ತಿ, ಬಿಲ್ಲುಬಾಣ, ಇವೆಲ್ಲ ಕ್ರೌರ್ಯದ ಸಂಕೇತಗಳಲ್ಲವೇ? ಮಹಾರಾಷ್ಟ್ರ ಸರ್ಕಾರವು ಛತ್ರಪತಿ ಶಿವಾಜಿ ಅಶ್ವರೋಹಿಯಾಗಿ ಬಿಚ್ಚುಗತ್ತಿಯನ್ನು ಝಳಪಿಸುತ್ತಿರುವ ಆಗಾಧ ಎತ್ತರದ ಪ್ರತಿಮೆಯೊಂದನ್ನು ಸಾವಿರಾರು ಕೋಟಿ ಹಣ ಖರ್ಚುಮಾಡಿ ಮುಂಬೈ ಸಮೀಪ ದ್ವೀಪದಲ್ಲಿ ಸ್ಥಾಪಿಸಲು ಹೊರಟಿದೆ. ಶಿವಾಜಿಯ ಕೈಯಲ್ಲಿ ಬಿಚ್ಚುಗತ್ತಿಯಿಲ್ಲದ ಪ್ರತಿಮೆ ಸ್ಥಾಪಿಸಬಹುದಲ್ಲವೇ? ಶಿವಾಜಿಯ ಕೈಯಲ್ಲಿ ಬಿಚ್ಚುಗತ್ತಿಯಿಲ್ಲದಿದ್ದರೆ ಶಿವಾಜಿ ತೋರಿಸಿದ, ಮಾಡಿದ ಶೌರ್ಯಗಳು ಮುಚ್ಚಿ ಹೋಗುತ್ತವೆಯೇ? ಇತಿಹಾಸದ ಪುಟಗಳು ಶಿವಾಜಿಯ ಯಶೋಗಾಥೆಯನ್ನು ಹೇಳಿಯೇ ಹೇಳುತ್ತವೆ. ಶೌರ್ಯ ದೊಂದಿಗೆ ಬಿಚ್ಚುಗತ್ತಿಯನ್ನು ಸಮೀಕರಣಗೊಳಿಸುವುದು ಸಮಾಜದಲ್ಲಿ ಕ್ರೌರ್ಯಕ್ಕೆ ಮನ್ನಣೆ ಕೊಟ್ಟಾಂತಾಗುತ್ತದೆ. ಪ್ರತಿಮೆಯನ್ನು ನೋಡುವ ಹೊಸ ಪೀಳಿಗೆಯ ಮೇಲೆ ಎಂಥ ದುಷ್ಪರಿಣಾಮ ಬೀರಬಲ್ಲದೆಂದು ಊಹಿಸಿಕೊಳ್ಳಬಹುದು. ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಬಂದೂಕು ಮತ್ತು ಪಿಸ್ತೂಲುಗಳು ದೊರೆಯಲು ಸುಲಭ ಮಾರ್ಗಗಳಿರುವುದರಿಂದ ಅಲ್ಲಿಯ ಮಕ್ಕಳು ಶಾಲೆಗೂ ಫಿಸ್ತೂಲು ತೆಗೆದುಕೊಂಡು ಬಂದು ಸಹವಿದ್ಯಾರ್ಥಿಗಳನ್ನು ಸಾಯಿಸುವ ಸುದ್ದಿಯನ್ನು ನಾವು ಓದಿದ್ದೇವೆ. ಶಿವಾಜಿ ಮಾಡಿದ ದೇಶಾಭಿಮಾನದ ಸಂಕೇತವಾಗಿ ಈ ವಿಗ್ರಹ ಸ್ಥಾಪಿತಗೊಳ್ಳುತ್ತಿರುವಾಗಲೇ ಜಲಚರಗಳ ವಿನಾಶ ಮತ್ತು ಅಲ್ಲಿಯ ಮೀನುಗಾರರ ಜೀವನ ವಿನಾಶವಾಗುತ್ತಿದೆ. ಈ ವಿಪರ್ಯಾಸ ಸರ್ಕಾರಕ್ಕೆ ಹೊಳೆಯುವುದಿಲ್ಲವೇ? ವಿಗ್ರಹದ ಶಂಕು ಸ್ಥಾಪನೆ ಮಾಡಿದ ಪ್ರಧಾನಿ ಮೋದಿಯವರಿಗೂ ಗೊತ್ತಾಗಲಿಲ್ಲವೇ? ತಮಿಳುನಾಡಿನ ಜಲ್ಲಿಕಟ್ಟು ಕ್ರಿಡೆಯು ಸಹ ಮಾನವನ ಕ್ರೌರ್ಯ ಸ್ವಭಾವಕ್ಕೆ ಹಿಡಿದ ಕೈಗನ್ನಡಿ ಮಾನವ ದಾನವನಾಗುತ್ತಿರುವ ಪರಿಯನ್ನು ತಪ್ಪಿಸುವುದು ಹೇಗೆಂಬುದೇ ಚಿಂತನೆಗೆ ಒಂದು ಸಂಗತಿ. ●

ಚಂಪಾರಣ್ಯ ಸತ್ಯಗ್ರಹ ಮತ್ತು ವರ್ತಮಾನ

– ಸುರೇಂದ್ರ ಕೌಲಗಿ

ನೂರು ವರ್ಷಗಳ ಹಿಂದೆ ರೈತರು ಶೋಷಣೆಯ ವಿರುದ್ಧ ಬುದ್ಧಿಬಲದಿಂದಲೂ, ನಿರ್ಭಯತ್ವದಿಂದಲೂ ಹೋರಾಡುವಂತೆ ಪ್ರೇರೆಪಿಸಿ ಯಶಸ್ಸು ಪಡೆಯುವಂತೆ ಮಾಡಿದವರು ಮಹಾತ್ಮನಾಗಿರದ ಮೋಹನದಾಸ್ ಕರಮಚಂದ್ರ ಗಾಂಧೀ. ಫಲವತ್ತಾದ ಭೂಮಿ, ಪ್ರಕೃತಿ ಸಂಪನ್ನತೆ ಇದ್ದರೂ ಅತ್ಯಂತ ಬಡತನ, ನಿರಕ್ಷರತೆ, ನಿರುದ್ಯೋಗದಿಂದ ಬಳಲುತ್ತಿದ್ದ ಬಿಹಾರ ರಾಜ್ಯದ ಚಂಪಾರಣ್ಯ ಜಿಲ್ಲೆಯಲ್ಲಿ ಗಾಂಧೀಜಿ ಅಲ್ಲಿಯ ರೈತರಿಗಾಗುತ್ತಿದ್ದ ಅನ್ಯಾಯದ ವಿರುದ್ಧ ಹೋರಾಟ ಮಾಡುತ್ತಲೇ ಹೋರಾಟದಲ್ಲಿ ತೊಡಗಿರುವವರನ್ನೂ ಮತ್ತು ಸುತ್ತಲಿನ ಜನರನ್ನು ಸಬಲೀಕರಣಗೊಳಿಸುತ್ತಾ ಸುಧಾರಣೆಯತ್ತ ಒಯ್ಯುವ ಕೆಲಸವನ್ನು ಗಾಂಧೀ ಮಾಡಿದರು.

ಚಂಪಾರಣ್ಯ ಸತ್ಯಾಗ್ರಹವನ್ನು ಕೇವಲ ರೈತರ ಸಮಸ್ಯೆಯ ನಿವಾರಣೆಯ ಯಶಸ್ಸಿನ ಹೋರಾಟವೆಂದು ಮಾತ್ರ ಪರಿಗಣಿಸದೆ ಅದೊಂದು ದೇಶ ಕಟ್ಟುವ ಕೆಲಸದ ಮಹತ್ವದ ಪ್ರಕ್ರಿಯೆ ಎಂದೂ ಮತ್ತು ಅದನ್ನು ವರ್ತಮಾನದ ದೇಶ ಕಟ್ಟುವಿಕೆಯ ಕೆಲಸಕ್ಕೆ ಮಾದರಿಯೆಂದೂ ಭಾವಿಸಬೇಕು.

ನೂರು ವರ್ಷಗಳ ಹಿಂದೆ ಬಡತನವಿತ್ತು, ಇಂದೂ ಇದೆ. ನಿರುದ್ಯೋಗವಿತ್ತು, ಇಂದೂ ಇದೆ. ರೈತರ ಶೋಷಣೆ ಇತ್ತು, ಇಂದೂ ಇದೆ. ಶಿಕ್ಷಣದ ಪ್ರಚಾರದ ಅಗತ್ಯವಿತ್ತು, ಇಂದೂ ಇದೆ. ಕೈಗಾರಿಕೆಗಳ ಅಗತ್ಯವಿತ್ತು, ಇಂದೂ ಇದೆ. ಮಹಿಳೆಯರ ಶೋಷಣೆ ಇತ್ತು, ಇಂದೂ ಇದೆ. ವಿದೇಶಿಯರು ಭೂಮಾಲೀಕರಾಗಿ ಸ್ಥಳಿಯರ ಶೋಷಣೆ ಮಾಡಿದರು. ಅದು ಇಂದೂ ಇದೆ. ಹೀಗೆ ನೂರು ವರ್ಷಗಳ ಹಿಂದೆ ಚಂಪಾರಣ್ಯ ಸತ್ಯಾಗ್ರಹವನ್ನು ಗಾಂಧೀಜಿ ಹೂಡಿದಾಗ ಯಾವ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಸನ್ನಿವೇಶಗಳು ದೇಶದಲ್ಲಿ ಇದ್ದವೋ ಅಂಥದೇ ಸನ್ನಿವೇಶಗಳು ವರ್ತಮಾನದಲ್ಲಿಯೂ ಇವೆ. ಆದ್ದರಿಂದ ಚಂಪಾರಣ್ಯ ಸತ್ಯಾಗ್ರಹದ ನೂರು ವರ್ಷದ ನೆನಪಿನ ಆಚರಣೆಯನ್ನು ವರ್ತಮಾನದ ಪರಿಸಿತ್ಥಿಯ ಮಸೂರಿನ ಮೂಲಕ ನೋಡುವ ಪ್ರಯತ್ನ ಮಾಡಬೇಕು ಮತ್ತು ಚಂಪಾರಣ್ಯ ಸತ್ಯಾಗ್ರಹದ ಹಿಂದಿದ್ದ ಗಾಂಧೀಜಿಯವರ ಮೂಲ ವಿಚಾರಗಳನ್ನು ತಿಳಿದುಕೊಂಡು ವರ್ತಮಾನದಲ್ಲಿ ಅವುಗಳನ್ನು ನಮ್ಮ ರಾಜಕೀಯ, ಆರ್ಥಿಕ, ಶೈಕ್ಷಣಿಕ ಕ್ಷೇತ್ರಗಳಿಗೆ ಅನ್ವಯಿಸಿಕೊಳ್ಳಬಹುದೇ ಎಂಬುದಾಗಿಯೂ ವಿಚಾರ ಮಾಡಬೇಕು.

ನೂರು ವರ್ಷಗಳ ಹಿಂದೆ ಗಾಂಧೀಜಿ ಬರೆದಿದ್ದ "ಹಿಂದ್ ಸ್ವರಾಜ್" ಪುಸ್ತಕದ ಆಚರಣೆ ಆಯಿತು! ದಂಡಿಯಾತ್ರೆಯ ದಾರಿಯಲ್ಲಿ ಅಣಕು ಯಾತ್ರೆಯೂ ನಡೆಯಿತು. ಆದರೆ ಆ ಎಲ್ಲಾ ಆಚರಣೆಗಳಿಂದ ದೇಶದ ಜನಜೀವನದಲ್ಲಾಗಲಿ, ಇತರೇ ಕ್ಷೇತ್ರಗಳಲ್ಲಾಗಲಿ, ಯಾವುದೇ ಮಹತ್ತರವಾದ ಪರಿವರ್ತನೆ ತರಲು ಸಾಧ್ಯವಾಗಲಿಲ್ಲ. ಇದೊಂದು ವಿಷಾದನೀಯ ಸಂಗತಿ. ಚಂಪಾರಣ್ಯ ಸತ್ಯಾಗ್ರಹದ ನೂರು ವರ್ಷದ ನೆನಪಿನ ಆಚರಣೆಯೂಕೂಡ ವ್ಯರ್ಥ ಕಸರತ್ತಾಗಬಾರದು. ೨೦೧೭ ಮಾರ್ಚ ೨೩-೨೪ ನೇ ದಿನಾಂಕಗಳಲ್ಲಿ ಬಿಹಾರದ ಚಂಪಾರಣ್ಯ ಜಿಲ್ಲೆಯ ಜಿಲ್ಲಾ ಕೇಂದ್ರವಾದ ಮೋತಿಹಾರಿಯಲ್ಲಿರುವ ಬಾಪುಧಾಮ್ ಎಂಬಲ್ಲಿ ಸಮ್ಮೇಳನ ನಡೆಯಲಿದೆ. ಸಮ್ಮೇಳನದಲ್ಲಿ ದೇಶದ ಎಲ್ಲ ಕಡೆಯಿಂದ ಜನರು ಸೇರಬೇಕು. ತದನಂತರ ಚಂಪಾರಣ್ಯ ಸತ್ಯಾಗ್ರಹದ ಗುಣವಿಶೇಷಗಳನ್ನು ತಮ್ಮತಮ್ಮ ಕ್ಷೇತ್ರದಲ್ಲಿ ಜಾರಿಗೆ ತರಲು ಪ್ರಯತ್ನಿಸಬೇಕು. ದೇಶದಲ್ಲಿ ಈಗ ಬೀಸುತ್ತಿರುವ ಔದ್ಯೋಗಿಕರಣದ ಗಾಳಿಯಲ್ಲಿ ನಮ್ಮ ದೇಶ ತೂರಿಕೊಂಡು ಹೋಗದಂತೆ ಕಡ್ಡಾಯವಾಗಿ ಪ್ರಯತ್ನಿಸಬೇಕು. ನಮ್ಮ ದೇಶದ ಸಂಸ್ಕೃತಿ, ಜನಮಾನಸ, ಭೌಗೋಳಿಕ ಸನ್ನಿವೇಶ, ಹವಾಗುಣ, ಜನಸಂಖ್ಯೆ ಇತ್ಯಾದಿಗಳನ್ನು ಗಮನದಲ್ಲಿರಿಸಿಕೊಂಡೇ ಕೈಗಾರಿಕೀಕರಣ ಮಾಡುವಂತೆ ಸರ್ಕಾರದ ಮೇಲೆ ಒತ್ತಾಯ ತರಬೇಕು, ಸರ್ಕಾರ ಹಾಗೆ ಮಾಡದಿದ್ದಲ್ಲಿ ಸತ್ಯಾಗ್ರಹ ಮಾಡಬೇಕು.

ಚಂಪಾರಣ್ಯ ಸತ್ಯಾಗ್ರಹವನ್ನು ಗಾಂಧೀಜಿ ಪ್ರಾರಂಭಿಸಿದರು. ಸತ್ಯಾಗ್ರಹದ ಯಶಸ್ಸಿಗೆ ಸತ್ಯಾಗ್ರಹಿಗಳೆಲ್ಲರ ಸಹಕಾರ ಕಾರಣವಾಗಿದ್ದರೂ ಗಾಂಧೀಜಿಯವರ ವ್ಯಕ್ತಿತ್ವ, ಕಾರ್ಯಪದ್ಧತಿ ಮುಂತಾದವುಗಳು ಪ್ರಮುಖ ಕಾರಣವಾದವು. ಗಾಂಧೀಜಿ ದೇಶದ ಸಾರ್ವಜನಿಕ ವೇದಿಕೆಯ ಮೇಲೆ ಬರುವ ಮುನ್ನ ದೇಶದಲ್ಲಿ ಅನೇಕ ಮಹನೀಯರು ದೇಶದ ಪುನರುಜ್ಜೀವನಕ್ಕಾಗಿ ಕೆಲಸ ಮಾಡಿದ್ದರು. ಆದರೆ ಅವರೆಲ್ಲರೂ ದೂರದ ಆಗಸದಲ್ಲಿ ಹೊಳೆಯುವ ಗ್ರಹಗಳಂತೆ ಇದ್ದರು. ಆದರೆ ಗಾಂಧೀಜಿ ಭೂಮಿಯ ಮೇಲೆ ಬಲವಾಗಿ ಕಾಲೂರಿದಂಥವರಾಗಿದ್ದರು. ಜನರಿಂದಲೇ ಪ್ರೇರಣೆ ಪಡೆಯುವ, ಜನರಿಗಾಗಿಯೇ ಕೆಲಸ ಮಾಡುವ ವ್ಯಕ್ತಿಯಾಗಿದ್ದರು.

ಅವರು ಯಾವುದೇ ಒಂದು ಗೆರೆಗೆ ಅಂಟಿಕೊಂಡವರಲ್ಲ; ವಿಧೇಯನಾದ ಹಿಂದೂ ಆಗಲಿ, ರಾಷ್ಟ್ರವಾದಿಯಾಗಿಯೂ ಇರಲಿಲ್ಲ. ಯಾವುದೇ ಸಿದ್ಧಾಂತ ಅವರನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿರಲಿಲ್ಲ. ಅವರು ಸ್ವತಂತ್ರರು, ಅವರು ಕಾರ್ಯವಿಧಾನದ ಬಗ್ಗೆ ಊಹಾತೀತರಾಗಿದ್ದರು. ಸಾಮಂಜಸ್ಯತತೆ ಎಂಬುದು ಅವರಿಗೆ ದೂರವಾಗಿತ್ತು. ಅವರಲ್ಲಿ ಬಂಡಾಯಗಾರನ ಧೈರ್ಯವಿತ್ತು. ಆ ಧೈರ್ಯದ ಜೊತೆಗೆ ತನ್ನ ಆತ್ಮಾಸಾಕ್ಷಿಗನುಗುಣವಾಗಿ ನಡೆಯುವ ಧೈರ್ಯವೂ ಇತ್ತು. ಕೇವಲ ಕ್ರಿಯೆಯಲ್ಲಿಯ

ಸಾಮಂಜಸ್ಯತೆ ಅವರಿಗೆ ಇಷ್ಟವಿರಲಿಲ್ಲ. ಬದಲಿಗೆ ಆ ಸಮಯಕ್ಕೆ ತೋರುವ ಸತ್ಯದೊಂದಿಗೆ ಸಾಮಂಜಸ್ಯತೆ ಹೊಂದುವುದು ಅವರ ಸ್ವಭಾವವಾಗಿತ್ತು. ಆದ್ದರಿಂದಲೇ "ನಾನು ಸತ್ಯದಿಂದ ಸತ್ಯಕ್ಕೆ ಬೆಳೆಯುತ್ತಾ ಹೋಗಿದ್ದೇನೆ" ಎಂದು ಅವರು ಹೇಳಲು ಸಾಧ್ಯವಾಯಿತು.

ಇಂದು ನಮ್ಮ ದೇಶದಲ್ಲಿ ವಿವಿಧ ಶೋಷಣೆಗಳ ವಿರುದ್ಧ ಸಂಬಂಧಿಸಿದ ಶೋಷಿತರನ್ನು ಸಂಘಟಿಸಿ ವಿವಿಧ ಬಾವುಟಗಳ ಅಡಿಯಲ್ಲಿ ಹೋರಾಟಗಳು ನಡೆಯುತ್ತಲೇ ಇವೆ. ಆದರೆ ಆ ಎಲ್ಲ ಹೋರಾಟಗಳೂ ವಿಫಲತೆಯಲ್ಲಿಯೇ ಕೊನೆಗೊಳ್ಳುತ್ತಿವೆ! ಶೋಷಕರ ಅಟ್ಟಹಾಸ ನಡೆದೇ ಇದೆ. ಇದಕ್ಕೆ ಕಾರಣ ಆ ಎಲ್ಲ ಹೋರಾಟಗಳ ಮುಖಂಡರರಲ್ಲಿ ಗಾಂಧೀಜಿಯವರಲ್ಲಿದ್ದ ಗುಣಗಳ ತೀವ್ರ ಅಭಾವ, ಆದ್ದರಿಂದ ಆ ಹೋರಾಟಗಳನ್ನು ನಡೆಸುವವರು ಮೊದಲು ಗಾಂಧೀಜಿಯವರಲ್ಲಿದ್ದ ಗುಣ ಸ್ವಭಾವಗಳನ್ನು ತಮ್ಮಲ್ಲಿ ಆರ್ವಿರ್ಭವಿಸಿಕೊಳ್ಳಬೇಕಾದುದು ಅಗತ್ಯ.

ಚಂಪಾರಣ್ಯದಲ್ಲಿ ಗಾಂಧೀಜಿಯವರು ಸತ್ಯಾಗ್ರಹ ಮಾಡಿದ್ದು ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೂವತ್ತು ವರ್ಷಗಳ ಮೊದಲು. ದೇಶದ ಗ್ರಾಮೀಣ ಜನರು ಎಂಥ ಶೋಚನೀಯ ಸಾಮಾಜಿಕ ಸ್ಥಿತಿಯಲ್ಲಿದ್ದಾರೆಂಬುದನ್ನು ಗಾಂಧೀಜಿಯವರು ಅರಿತುಕೊಂಡೆ ಸತ್ಯಾಗ್ರಹದ ಜೊತೆ ಜೊತೆಯಲ್ಲಿಯೇ ಸ್ವಚ್ಛತಾ ಆಂದೋಲನ, ಆರೋಗ್ಯ, ಸುರಕ್ಷಾ ಕಾರ್ಯಕ್ರಮ, ನಿರಕ್ಷರತೆ ನಿವಾರಣಾ ಕಾರ್ಯಕ್ರಮ ಮತ್ತು ಜನರಲ್ಲಿದ್ದ ಸರ್ಕಾರದ ಭಯದ ನಿವಾರಣೆ ಮುಂತಾದ ಕಾರ್ಯಕ್ರಮಗಳನ್ನು ಕೈಗೊಂಡು ಸ್ವತಂತ್ರ ಭಾರತದ ಸುಯೋಗ್ಯ ಸಮಾಜದ ನಿರ್ಮಾಣಕ್ಕೆ ಅಡಿಪಾಯ ಹಾಕಿದರು. ಜನರನ್ನು ಸರ್ಕಾರದ ಭಯದಿಂದ ಬಿಡುಗಡೆಗೊಳಿಸುವುದೇ ಅವರ ಅಭಿವೃದ್ಧಿಗೆ ಪರಿಹಾರವೆಂದು ಗಾಂಧೀಜಿ ಹೇಳಿದರು. ಗಾಂಧೀಜಿಯವರು ಹೂಡಿದ್ದ ಸತ್ಯಾಗ್ರಹ ಎಷ್ಟು ಸತ್ಯಾಧಾರಿತವಾಗಿತ್ತೆಂದರೆ ಸರ್ಕಾರವು ಗಾಂಧೀಜಿಯವರ ವಿರುದ್ಧ ಹೂಡಿದ್ದ ವಿಚಾರಣೆ ಸರ್ಕಾರದ ವಿಚಾರಣೆಯೇ ಆಗಿ ಮಾರ್ಪಾಟ್ಟಿತು. ಒಂದರ್ಥದಲ್ಲಿ ಸರ್ಕಾರಕ್ಕೆ ತಿರುಮಂತ್ರವಾಯಿತು. ಈ ರೀತಿಯಾಗಿ ಸವಿನಯ ಕಾಯಿದೆ ಭಂಗದ ಪ್ರಥಮ ಪಾಠವನ್ನು ಗಾಂಧೀಜಿ ದೇಶಕ್ಕೆ ತೋರಿಸಿದರೆಂದೇ ಹೇಳಬೇಕು. ಇಂದಿನ ಹೋರಾಟಗಾರರು ತಿಳಿದುಕೊಳ್ಳಬೇಕಾದ ಸಂಗತಿಯೇನೆಂದರೇ ಗಾಂಧೀಜಿಯವರು ತಮ್ಮ ಚಂಪಾರಣ್ಯ ಸತ್ಯಾಗ್ರಹದ ಬಗ್ಗೆ ಅತಿಶಯೋಕ್ತಿಯ ವರದಿ ಬರದಂತೆ ನೋಡಿಕೊಂಡರು. ಅಗತ್ಯವಿದ್ದಲ್ಲಿ ತಾವೇ ವಸ್ತುನಿಷ್ಠ ವರದಿಯನ್ನು ಮಾಧ್ಯಮಕ್ಕೆ ಬಿಡುಗಡೆ ಮಾಡುತ್ತಿದ್ದರು. ಸತ್ಯಾಗ್ರಹದ ಸಮಯದಲ್ಲಿ ಅತ್ಯಂತ ಸಣ್ಣ ವಿಷಯದಲ್ಲಿಯೂ ಸತ್ಯವನ್ನೇ ಹೇಳಬೇಕೆಂಬ ಒತ್ತಾಯ ಗಾಂಧೀಜಿಯವರದಾಗಿತ್ತು. ಆದ್ದರಿಂದ ನೀಲಿ

ತೋಟದ ಮಾಲೀಕರು ರೈತರ ವಿರುದ್ಧ, ಗಾಂಧೀಜಿಯವರ ವಿರುದ್ಧ ಎತ್ತಿದ ಕತ್ತಿ ಜಮೀನ್ದಾರರ ಕಡೆಗೇ ತಿರುಗಿತು! ಹೋರಾಟವು ರಾಜಕೀಯಸ್ವರೂಪ ಪಡೆಯುವುದನ್ನು ತಪ್ಪಿಸಿದುದೂ ಮತ್ತು ಹೋರಾಟಕ್ಕೆ ಹಣ ಪಡೆದುಕೊಳ್ಳದೇ ಇದ್ದುದೂ ಕೂಡ ವಿಶೇಷ ಸಂಗತಿಯಾಗಿತ್ತು. ಅಲ್ಲದೆ ಅದು ಗಾಂಧೀಜಿಯವರ ವಿಚಾರಣೆ ಸತ್ಯ ಮತ್ತು ಅಹಿಂಸೆಯಲ್ಲಿಯ ಧೀರ ತನದ ಪ್ರಯೋಗವಾಯಿತು. ಏಳು ತಿಂಗಳ ಕಾಲ ನಡೆದ ಹೋರಾಟಕ್ಕೆ ಮೂರು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚು ಖರ್ಚಾಗಿರಲಿಲ್ಲ. ಅಷ್ಟೇ ಅಲ್ಲ ನೂರಾರು ರೂಪಾಯಿಗಳ ಉಳಿತಾಯವೂ ಕೂಡ ಆಯಿತು! ಇದಕ್ಕೆ ಕಾರಣ ಸತ್ಯಾಗ್ರಹದಲ್ಲಿ ತೊಡಗಿದ್ದವರೆಲ್ಲರೂ ಅತ್ಯಂತ ಸರಳ ಜೀವನ ನಡೆಸಿದುದೇ ಆಗಿತ್ತು. ಸತ್ಯಾಗ್ರಹದ ಸಂದರ್ಭದಲ್ಲಿ ಗಾಂಧೀಜಿಯವರು ಗ್ರಾಮಗಳಲ್ಲಿ ಪ್ರಾರಂಭಿಸಿದ್ದ ರಾತ್ರಿ ಪಾಠಶಾಲೆಗಳ ಅಧ್ಯಾಪಕರಿಗೆ ಊಟ ಮತ್ತು ವಸತಿಯನ್ನು ಗ್ರಾಮಸ್ಥರೇ ಒದಗಿಸಿದ್ದರು. ಆದರೆ ಇಂದು ಗ್ರಾಮಗಳಲ್ಲಿ ಅಂಥ ಮನೋಭಾವ ಇಲ್ಲವಾಗಿದೆ. ಎಲ್ಲವನ್ನೂ ಸರ್ಕಾರವೇ ಮಾಡಬೇಕು ಎಂಬ ಮನೋಭಾವನೆಯನ್ನು ಗ್ರಾಮಸ್ಥರು ಬೆಳೆಸಿಕೊಂಡಿದ್ದಾರೆ. ಒಂದರ್ಥದಲ್ಲಿ ತಮ್ಮ ಸ್ವಾವಲಂಬನೆಯ ಶಕ್ತಿಯನ್ನು ಕಳೆದುಕೊಂಡು ಪರಾವಲಂಬಿಗಳಾಗಿದ್ದಾರೆ. ಶಾಲೆಯಲ್ಲಿ ಅಕ್ಷರ ಜ್ಞಾನಕ್ಕಿಂತ ಚಾರಿತ್ರ್ಯ ಮತ್ತು ನೀತಿಗೆ ಹೆಚ್ಚು ಮಹತ್ವ ಕೊಡಲಾಗಿತ್ತು. ಹೀಗೆ ಚಂಪಾರಣ್ಯ ಸತ್ಯಾಗ್ರಹವು ಸ್ವತಂತ್ರ ಭಾರತದ ಸಮಸ್ಯೆಗಳ ನಿವಾರಣೆಗೆ ಪರಿಹಾರ ಮಾರ್ಗವನ್ನು ಸೂಚಿಸುವಂಥದ್ದಾಗಿದೆ. ಅಂದು ಚಂಪಾರಣ್ಯ ಸತ್ಯಾಗ್ರಹ ವಿದೇಶಿಯರ ಆಕ್ರಮಣ ಶೀಲತೆಯ ವಿರುದ್ಧ ನಡೆಯಿತು. ಅಲ್ಲಿಯ ವಿದೇಶಿಯರು ಇಂಗ್ಲೆಂಡ್‌ನಿಂದ ಮಾತ್ರ ಬಂದವರಾಗಿದ್ದರು. ಇಂದು ಭಾರತಕ್ಕೆ ಜಗತ್ತಿನ ಎಲ್ಲ ದೊಡ್ಡ ದೇಶಗಳ ಕಂಪನಿಗಳು ಬಂದಿವೆ. ಅವು ಇಲ್ಲಿ ಎಲ್ಲ ಮೂಲಭೂತ ಸೌಕರ್ಯಗಳನ್ನು ಪಡೆದಿವೆ. ಇಲ್ಲಿ ಲಾಭ ಮಾಡಿಕೊಂಡು ತಮ್ಮ ದೇಶವನ್ನು ಶ್ರೀಮಂತಗೊಳಿಸಿಕೊಳ್ಳುತ್ತಿವೆ. ಭಾರತೀಯರು ತಮ್ಮ ದೇಶದಲ್ಲಿಯೇ ತಮ್ಮ ದೇಶವಾಸಿಗಳ ಕೆಲವರ ಶ್ರೀಮಂತಿಕೆಯಿಂದ ಎರಡನೇ ದರ್ಜೆಯ ಪ್ರಜೆಗಳಾಗಿದ್ದಾರೆ. ೧೯೯೬ ರಲ್ಲಿ ಮೊ ಆಮ್ ಚೊಕ್ಸಿ ಭಾರತದ ನವ ಶ್ರೀಮಂತಿಕೆಯ ಅಟ್ಟಹಾಸ ಅಮೇರಿಕಾದಲ್ಲಿಯ ಶ್ರೀಮಂತಿಕೆಯನ್ನು ನಾಚಿಸುವಂಥದ್ದಾಗಿದೆಯೆಂದು ಹೇಳಿದ ಮಾತು, ಇಂದು ಹೆಚ್ಚು ಅನುಭವಕ್ಕೆ ಬರುತ್ತಿದೆ. ಆರ್ಥಿಕ ಅಸಮಾನತೆ ಅಸಂಗತ ಕೈಗಾರಿಕರಣದಿಂದ ಹೆಚ್ಚುತ್ತಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಎಪ್ಪತ್ತು ವರ್ಷಗಳಾದರೂ ನೂರು ವರ್ಷಗಳ ಹಿಂದೆ ಚಂಪಾರಣ್ಯದಲ್ಲಿದ್ದ ಪರಿಸ್ಥಿತಿಯೇ ಮುಂದುವರೆದಿದೆ. ಚಂಪಾರಣ್ಯ ಸತ್ಯಾಗ್ರಹ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವುದರಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿತ್ತು. ಈಗ ದೇಶ ಆರ್ಥಿಕ ಸ್ವಾತಂತ್ರ್ಯ ಪಡೆಯಲು ಚಂಪಾರಣ್ಯ ಸತ್ಯಾಗ್ರಹ ಪ್ರೇರಕವಾಗಲಿ.

●

ಬಾಪೂಜಿಯ ಗುಡಿಸಲಿನ ದಿವ್ಯ ಸಂದೇಶ

– ಚಂದ್ರ ಶೇಖರ್ ತಾಳ್ಯ

(೧೯೭೮ರ ಜನವರಿಯಲ್ಲಿ ಕ್ರಾಂತಿಕಾರಿ ಆಲೋಚನೆಗಳ ಸುಪ್ರಸಿದ್ಧ ಚಿಂತಕ ಇವಾನ್ ಇಲಿಚ್ ಸಮ್ಮೇಳನವೊಂದನ್ನು ಉದ್ಘಾಟಿಸಲು ಸೇವಾಗ್ರಾಮಕ್ಕೆ ಬಂದಿದ್ದರು. ಅವರು ಅಲ್ಲಿದ್ದ ಸಮಯದಲ್ಲಿ ಗಾಂಧೀಜಿಯವರ ಗುಡಿಸಲಿನಲ್ಲಿ ಕುಳಿತು ಹೆಚ್ಚು ಹೊತ್ತು ಕಳೆದರು. ಅವರು ಶಾಂತಿಯ ಚೈತನ್ಯವನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸಿದರು, ತಮ್ಮ ಉದ್ಘಾಟನಾ ಭಾಷಣದಲ್ಲಿ ತಮ್ಮದೇ ಆದ ಅಸಾಧಾರಣ ಶೈಲಿಯಲ್ಲಿ ಅದನ್ನೇ ಹೇಳಿದರು. ಗುಡಿಸಲಿನ ಬಗೆಗಿನ ಅನನ್ಯ ಗೌರವ ಮತ್ತು ಅದು ಯಾವ ಮೌಲ್ಯವನ್ನು ಒಳಗೊಂಡಿದೆ ಎನ್ನುವುದರ ಬಗೆಗಿನ ಮಾತು ಇಲ್ಲಿವೆ)

ಸ್ನೇಹಿತರೆ:

ಬೆಳಗ್ಗೆ ಮಹಾತ್ಮ ಗಾಂಧಿ ಬದುಕಿದ ಈ ಗುಡಿಸಲಿನಲ್ಲಿ ಕುಳಿತಿದ್ದಾಗ, ಈ ಪರಿಕಲ್ಪನೆಯ ಆಶಯವನ್ನು ಮತ್ತು ಅದು ನೀಡುವ ಸಂದೇಶವನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಈ ಗುಡಿಸಲಿನ ಎರಡು ಸಂಗತಿಗಳು ನನ್ನನ್ನು ಬಹುವಾಗಿ ಪ್ರಭಾವಿಸಿದವು. ಒಂದು ಆಧ್ಯಾತ್ಮದ ದೃಷ್ಟಿಕೋನ ಮತ್ತೊಂದು ಸೌಕರ್ಯದ ದೃಷ್ಟಿಕೋನ. ಈ ಮನೆಯನ್ನು ಕಟ್ಟಿಸಿದ ಗಾಂಧಿಯ ಮನೋಭಾವವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೆ; ಅದರ ಸರಳತೆ, ಸೌಂದರ್ಯ, ಅಚ್ಚುಕಟ್ಟುತನ ನನಗೆ ಇಷ್ಟವಾಯಿತು. ಗುಡಿಸಲು ಎಲ್ಲರೊಂದಿಗಿನ ಪ್ರೀತಿ , ಸಮಾನತೆಯ ತತ್ವವನ್ನು ಸಾರುವಂತಿದೆ. ಮೆಕ್ಸಿಕೋದಲ್ಲಿ ನನಗೆ ಒದಗಿಸಿರುವ ಮನೆ ಅನೇಕ ವಿಧದಲ್ಲಿ ಇದನ್ನೇ ಹೋಲುವಂತಿದೆ. ಅದರ ಚೈತನ್ಯವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ.

ಇಲ್ಲಿ ಈ ಮನೆಯಲ್ಲಿ ಏಳು ತರಹದ ಜಾಗಗಳಿವೆ. ನೀವು ಒಳಗೆ ಬರುತ್ತಿದ್ದಂತೆಯೇ ನಿಮ್ಮ ಚಪ್ಪಲಿ, ಶೂಗಳನ್ನು ಬಿಡುವ ಜಾಗ, ಅಲ್ಲಿಯೇ ನೀವು ಮನೆಯ ಒಳಗೆ ಹೋಗಲು ಮಾನಸಿಕವಾಗಿ ಮತ್ತು ದೈಹಿಕವಾಗಿ ನಿಮ್ಮಷ್ಟಕ್ಕೇ ತಯಾರಾಗುತ್ತೀರಿ. ಆಮೇಲೆ ಬರುವುದು ನಡುಮನೆ, ಅದು ಒಂದು ದೊಡ್ಡ ಸಂಸಾರಕ್ಕೆ ಸಾಕಾಗುವಷ್ಟು ವಿಶಾಲವಾದದ್ದು. ಬೆಳಗಿನ ನಾಲ್ಕು ಗಂಟೆಯಲ್ಲಿ ನಾನು ಪ್ರಾರ್ಥನೆಗೆಂದು ಕುಳಿತಿದ್ದಾಗ ನನ್ನೊಂದಿಗೆ ನಾಲ್ಕು ಜನ ಒಂದು ಬದಿಯ ಗೋಡೆಗೆ ಒರಗಿ ಕುಳಿತಿದ್ದರು, ಇನ್ನೊಂದು ಬದಿಯಲ್ಲಿ ಹೆಚ್ಚಿನ ಸಂಖ್ಯೆಯ ಜನರು ಕುಳಿತ ಮೇಲೂ ಇನ್ನೂ ಜಾಗ ಉಳಿಯುವಂತೆ ಇತ್ತು. ಈ ಕೋಣೆ ಪ್ರತಿಯೊಬ್ಬರೂ ಬಂದು ಉಳಿದವರ ಜೊತೆ ಸೇರಿಕೊಳ್ಳುವಂತೆ ಇತ್ತು. ಮೂರನೆಯದು ಸ್ವತಃ ಗಾಂಧೀಜಿಯೇ ಕುಳಿತು ಕೆಲಸ ಮಾಡಿದ ಜಾಗ. ಅಲ್ಲಿ

ಇನ್ನೂ ಎರಡು ಕೊಠಡಿಗಳಿವೆ, ಒಂದು ಬರುವ ಅಥಿತಿಗಳಿಗಾಗಿ ಇನ್ನೊಂದು ಅಸಹಾಯಕರಿಗಾಗಿ. ಒಂದು ತೆರೆದ ವೆರಾಂಡಾ ಇದ್ದು ಅಲ್ಲಿ ವಿಶಾಲವಾದ ಸ್ನಾನದ ಮನೆಯೂ ಇದೆ. ಈ ಎಲ್ಲ ಸ್ಥಳಗಳೂ ಸಾವಯವ ಸಂಬಂಧ ಹೊಂದಿವೆ.

ಒಂದು ವೇಳೆ ಶ್ರೀಮಂತರೇನಾದರೂ ಈ ಗುಡಸಲಿಗೆ ಬಂದರೆ ಅವರು ಇದನ್ನು ನೋಡಿ ಗೇಲಿ ಮಾಡಬಹುದು ಎಂದು ನನಗನಿಸುತ್ತದೆ. ಸರಳ ಭಾರತೀಯನ ದೃಷ್ಟಿಯಲ್ಲಿ ನೋಡಿದಾಗ ಇದಕ್ಕಿಂತಲೂ ದೊಡ್ಡದಾದ ಮನೆಯ ಅಗತ್ಯವಾದರೂ ಎಲ್ಲಿದೆ ಎಂಬ ಭಾವನೆ ಬರುತ್ತದೆ. ಈ ಮನೆಯನ್ನು ಮರ ಮತ್ತು ಮಣ್ಣನ್ನು ಬಳಸಿ ಕಟ್ಟಲಾಗಿದೆ. ಈ ಮನೆಯನ್ನು ನಿರ್ಮಿಸಿದ್ದು ಯಂತ್ರಗಳಲ್ಲ, ಸಾಕ್ಷಾತ್ ಮನುಷ್ಯರು. ಇದನ್ನು ನಾನು ಗುಡಿಸಲೆಂದು ಕರೆದೆ, ಆದರೆ ಇದು ನಿಜವಾಗಿಯೂ ಗೃಹ(ಹೋಮ್). ಮನೆಗೂ ಗೃಹಕ್ಕೂ ವ್ಯತ್ಯಾಸವಿದೆ. ಎಲ್ಲಿ ಮನುಷ್ಯ ತನ್ನ ಸಾಮಾನು ಸರಂಜಾಮು, ಪೀಠೋಪಕರಣಗಳನ್ನು ಇಡುತ್ತಾನೋ ಅದು ಮನೆ. ಇಲ್ಲಿ ಮನುಷ್ಯನಿಗಿಂತಲೂ ಪೀಠೋಪಕರಣಗಳ ಭದ್ರತೆ, ಅನುಕೂಲತೆಗಳೇ ಪ್ರಮುಖವಾಗಿರುತ್ತದೆ. ದೆಹಲಿಯಲ್ಲಿ ನನನ್ನು ಒಂದು ಮನೆಯಲ್ಲಿ ಉಳಿಸಿದ್ದರು. ಆ ಮನೆ ಅನೇಕ ಅನುಕೂಲತೆಯನ್ನು ಹೊಂದಿತ್ತು. ಆ ಕಟ್ಟಡವನ್ನು ಈ ಅನುಕೂಲತೆಗೆ ತಕ್ಕಂತೆಯೇ ನಿರ್ಮಿಸಲಾಗಿತ್ತು. ಸಿಮೆಂಟು ಮತ್ತು ಇಟ್ಟಿಗೆಗಳನ್ನು ಬಳಸಿ ನಿರ್ಮಿಸಿದ ಆ ಮನೆ ಪೀಠೋಪಕರಣ ಮತ್ತು ಇತರೆಲ್ಲ ಅನುಕೂಲತೆಗೆ ಹೊಂದಿಕೊಳ್ಳುವಂತಿದ್ದು ಒಂದು ಪೆಟ್ಟಿಗೆಯಂತೆ ಕಾಣುತ್ತಿತ್ತು. ನಮ್ಮ ಬದುಕಿನಲ್ಲಿ ಹೀಗೆ ಪೀಠೋಪಕರಣಗಳನ್ನು, ಮತ್ತಿತರ ವಸ್ತುಗಳನ್ನು ಕೂಡಿ ಹಾಕುತ್ತಾ ಹೋದರೆ ಅವು ಎಂದಿಗೂ ನಮಗೆ ನಮ್ಮ ಅಂತರಂಗದ ಶಕ್ತಿಯನ್ನು ನೀಡಲಾರವು ಎನ್ನುದನ್ನು ನಾವು ಅರಿಯಬೇಕು. ಇವೆಲ್ಲ ಕುಂಟುವ ವ್ಯಕ್ತಿಗೆ ಊರುಗೋಲಿದ್ದಂತೆ. ನಮ್ಮ ಅನುಕೂಲತೆಗಳು ಹೆಚ್ಚಿದಂತೆಲ್ಲಾ ಅವುಗಳ ಅವಲಂಬನೆಯೂ ಅಷ್ಟೇ ಪ್ರಮಾಣದಲ್ಲಿ ಹೆಚ್ಚುತ್ತಾ ಹೋಗುತ್ತದೆ. ಅದರಿಂದ ನಮ್ಮ ಬದುಕು ಪರಿಮಿತಗೊಳ್ಳುತ್ತದೆ. ಇದಕ್ಕೆ ವಿರುದ್ಧವಾಗಿ ಗಾಂಧೀಜಿಯ ಕೊಠಡಿಯಲ್ಲಿ ನಾನು ನೋಡಿದ ಪೀಠೋಪಕರಣಗಳು ಬೇರೊಂದು ಕ್ರಮದಲ್ಲಿದ್ದವು. ಅವುಗಳನ್ನೇ ಅವಲಂಬಿಸುವ ಅಗತ್ಯ ಅಲ್ಲಿ ತೀರಾ ತೀರಾ ಕಡಿಮೆ ಇತ್ತು. ಎಲ್ಲಾ ವಿಧವಾದ ಅನುಕೂಲತೆಯ ಮನೆ ನಾವು ದುರ್ಬಲರಾಗಿದ್ದೇವೆ ಎನ್ನುವುದನ್ನು ತೋರಿಸುತ್ತದೆ. ನಾವು ಬದುಕುವ ಶಕ್ತಿಯನ್ನು ಎಷ್ಟು ಕಳೆದುಕೊಳ್ಳುತ್ತೇವೋ, ಅಷ್ಟು ನಾವು ಸಂಪಾದಿಸಿದ ವಸ್ತುಗಳ ಮೇಲೆ ಅವಲಂಬಿತರಾಗುತ್ತೇವೆ. ಇದೊಂಥರಾ ನಾವು ಮನುಷ್ಯರ ಆರೋಗ್ಯಕ್ಕಾಗಿ ಆಸ್ಪತ್ರೆಗಳನ್ನು ಮತ್ತು ಮಕ್ಕಳ ಶಿಕ್ಷಣಕ್ಕಾಗಿ ಸ್ಕೂಲುಗಳನ್ನು ಅವಲಂಬಿಸಿದಂತೆ. ದುರದೃಷ್ಟವಶಾತ್ ಆಸ್ಪತ್ರೆ ಮತ್ತು ಸ್ಕೂಲು ಎರಡೂ ರಾಷ್ಟ್ರೀಯ

ಆರೋಗ್ಯ ಹಾಗೂ ಜ್ಞಾನದ ಸೂಚಕಗಳಲ್ಲ. ವಾಸ್ತವವಾಗಿ ಹೆಚ್ಚು ಸಂಖ್ಯೆಯ ಆಸ್ಪತ್ರೆಗಳು ಮತ್ತು ಸ್ಕೂಲುಗಳು ಅನಾರೋಗ್ಯದ ಮತ್ತು ಅಜ್ಞಾನದ ಸೂಚಕಳಾಗುತ್ತವೆ. ಅದೇ ರೀತಿ ಬದುಕಿನ ಸೌಲಭ್ಯಗಳು ಹೆಚ್ಚಾದಷ್ಟೂ ಮಾನವ ಬದುಕಿನ ಸೃಜನಶೀಲ ಅಭಿವ್ಯಕ್ತಿ ಕುಂಠಿತಗೊಳಿಸುತ್ತದೆ.

ದುರದೃಷ್ಟವೆಂದರೆ, ಆ ರೀತಿಯ ಅನುಕೂಲತೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವವರನ್ನು ಶ್ರೇಷ್ಠ ಜಂತುಗಳೆಂದು(ಕ್ರೀಚರ್ಸ್) ಪರಿಗಣಿಸುವುದೇ ಸನ್ನಿವೇಶದ ಒಂದು ಒಗಟು. ಯಾವ ಸಮಾಜದಲ್ಲಿ ಅನಾರೋಗ್ಯಕ್ಕೆ ವಿಪರೀತ ಕಾಳಜಿ ತೋರಲಾಗುತ್ತದೋ ಮತ್ತು ಕೃತಕ ಕಾಲುಗಳನ್ನು ಉಪಯೋಗಿಸುವವರನ್ನು ಶ್ರೇಷ್ಠರೆಂದು ಪರಿಗಣಿಸಲಾಗುತ್ತದೋ ಅಂಥಾ ಸಮಾಜವನ್ನು ಅನೈತಿಕ ಸಮಾಜವೆಂದು ಪರಿಗಣಿಸಿದಂತಲ್ಲವೆ?. ನಾನು ಗಾಂಧೀಜಿಯ ಕೊಠಡಿಯಲ್ಲಿ ಕುಳಿತಿದ್ದಾಗ ಈ ವಕ್ರತೆಯ ಬಗ್ಗೆಯೇ ಆಲೋಚಿಸುತ್ತ ಸಂಕಟಪಟ್ಟೆ. ಮನುಷ್ಯನ ಅಭ್ಯುದಯಕ್ಕೆ ಕೈಗಾರಿಕಾ ನಾಗರೀಕತೆಯೇ ದಾರಿ ಎಂದು ಯೋಚಿಸಬಾರದು ಎಂಬ ನಿರ್ಣಯಕ್ಕೆ ನಾನು ಬಂದಿದ್ದೇನೆ. ನಮ್ಮ ಆರ್ಥಿಕ ಅಭಿವೃದ್ಧಿಗೆ ಉತ್ಪಾದನೆಯ ದೊಡ್ಡ ದೊಡ್ಡ ಯಂತ್ರಗಳು, ಹೆಚ್ಚು ಹೆಚ್ಚು ಸಂಖ್ಯೆಯ ಇಂಜಿನಿಯರುಗಳು, ವೈದ್ಯರು, ಪ್ರೊಫೆಸರುಗಳು ಬೇಕಾಗಿಲ್ಲವೆನ್ನುವುದು ಈಗಾಗಲೇ ಸಾಬೀತಾಗಿದೆ. ಆ ಜನರೆಲ್ಲ ಅಂತರಂಗದಲ್ಲಿ ಕಡು ಬಡವರಾಗಿರುತ್ತಾರೆ, ಅವರೆಲ್ಲ ಗಾಂಧೀಜಿ ಬದುಕಿದ ಈ ಗುಡಿಸಲಿಗಿಂತ ದೊಡ್ಡದಾದ ಮನೆಯನ್ನು ಬಯಸುವ ಜೀವನ ಶೈಲಿಯವರು ಎನ್ನುವುದು ನನಗೆ ಮನದಟ್ಟಾಗಿದೆ. ಅವರ ಬಗ್ಗೆ ನನಗೆ ಅನುಕಂಪವಿದೆ. ಹೀಗೆ ಮಾಡುವುದರಿಂದ ಅವರು ಅವರ ಚಲನಶೀಲ ಆತ್ಮವನ್ನು ಸ್ಥಾವರ ರಚನೆಗೆ ಒಪ್ಪಿಸಿಬಿಟ್ಟಿರುತ್ತಾರೆ. ಈ ಪ್ರಕ್ರಿಯೆಯಲ್ಲಿ ಅವರು ತಮ್ಮ ದೇಹದ ಸ್ಥಿತಿಸ್ಥಾಪಕ ಶಕ್ತಿ ಮತ್ತು ಬದುಕಿನ ಉತ್ಸಾಹವನ್ನು ಕಳೆದುಕೊಂಡುಬಿಟ್ಟಿರುತ್ತಾರೆ. ಪ್ರಕೃತಿಯ ಜೊತೆಗಿನ ಸಂಬಂಧ, ಸಹ ಜೀವಿಗಳ ನಿಕಟತೆ ಅವರಿಗೆ ಇರವುದೇ ಇಲ್ಲ.

ಗಾಂಧೀಜಿ ಬೋಧಿಸಿದ ಈ ಸರಳ ತತ್ವವನ್ನು ನೀವೇಕೆ ಅರ್ಥ ಮಾಡಿಕೊಳ್ಳುವುದಿಲ್ಲ ಎಂದು ನಾನು ಇಂದಿನ ಯೋಜಕರನ್ನು ಕೇಳಿದಾಗ, ಗಾಂಧೀಜಿಯ ದಾರಿಯಲ್ಲಿ ನಡೆಯುವುದು ತುಂಬಾ ಕಷ್ಟ ಮತ್ತು ಜನರು ಅದನ್ನು ಅನುಸರಿಸಲಾರರು ಎಂದು ಅವರು ಹೇಳುತ್ತಾರೆ. ಆದರೆ ಸನ್ನಿವೇಶದ ವಾಸ್ತವತೆ ಏನೆಂದರೆ ಗಾಂಧೀಜಿಯ ತತ್ವಗಳು ಯಾವ ಮಧ್ಯವರ್ತಿಗಳನ್ನಾಗಲಿ ಅಥವಾ ಕೇಂದ್ರೀಕೃತ ವ್ಯವಸ್ಥೆಯನ್ನಾಗಲಿ ಸಹಿಸುವುದಿಲ್ಲ. ಆದ್ದರಿಂದಲೇ ಯೋಜಕರು, ಮ್ಯಾನೇಜರುಗಳು, ರಾಜಕಾರಣಿಗಳು ಅದರ ಬಗ್ಗೆ ಉತ್ಸಾಹ ತೋರುವುದಿಲ್ಲ. ಇದು ಯಾಕೆ ಅರ್ಥವಾಗುವುದಿಲ್ಲ? ಜನರು

ಅಸತ್ಯ ಮತ್ತು ಹಿಂಸೆ ಮಾತ್ರ ತಾವು ಬಯಸಿದ ಗುರಿಯನ್ನು ತಲುಪಿಸುತ್ತದೆ ಎಂದುಕೊಂಡಿದ್ದಾರೆಯೇ? ಇಲ್ಲ. ಇದು ಹಾಗಲ್ಲ. ಸರಿಯಾದ ದಾರಿ ಸರಿಯಾದ ಗುರಿಗೇ ತಲುಪಿಸುತ್ತದೆಂದು ಸಾಮಾನ್ಯ ಮನುಷ್ಯ ಸರಿಯಾಗಿಯೇ ತಿಳಿದಿದ್ದಾನೆ. ಪಟ್ಟಭದ್ರ ಹಿತಾಸಕ್ತಿಯ ಜನ ಮಾತ್ರ ಇದನ್ನು ಅರ್ಥ ಮಾಡಿಕೊಳ್ಳಲು ನಿರಾಕರಿಸುತ್ತಾರೆ. ಶ್ರೀಮಂತರು ಇದನ್ನು ಅರ್ಥ ಮಾಡಿಕೊಳ್ಳಲು ಅಪೇಕ್ಷಿಸುವುದಿಲ್ಲ. ಶ್ರೀಮಂತರೆಂದು ನಾನು ಹೇಳಿದ್ದು, ಪ್ರತಿಯೊಬ್ಬ ಮನುಷ್ಯನಿಗೂ ಸಮಾನವಾಗಿ ಸಿಗದ ಜೀವನ ಸೌಕರ್ಯಗಳೆಲ್ಲ ಇರುವವರನ್ನು. ಈ ಸೌಕರ್ಯಗಳೆಂದರೆ ಅವರು ಬದುಕುವ, ತಿನ್ನುವ ಮತ್ತು ಜೀವಿಸುವ ಕ್ರಮ. ಅವರ ಬಳಕೆಯ ವಿಧಾನಗಳಲ್ಲಿ ಸತ್ಯವನ್ನು ಅರ್ಥ ಮಾಡಿಕೊಳ್ಳುವ ಶಕ್ತಿಯೇ ಕಳೆದು ಹೋಗಿರುತ್ತದೆ. ಇಂಥವರು ಗಾಂಧಿ ಎಂಬ ಕ್ಲಿಷ್ಟ ಪ್ರಮೇಯವನ್ನು ಅರ್ಥ ಮಾಡಿಕೊಳ್ಳವುದು, ಸಮೀಕರಿಸುವುದು ಕಷ್ಟ. ಅವರಿಗೆ ಸರಳತೆ ಎಂದರೆ ಯಾವ ಅರ್ಥವೂ ಇಲ್ಲದ್ದು. ಅವರಿರುವ ಸನ್ನಿವೇಶ ಸತ್ಯವನ್ನು ತಿಳಿಯಲು ಬಿಡುವುದಿಲ್ಲ. ಅವರು ಬಿದ್ದಿರುವ ಬಲೆಯಿಂದ ಹೊರಲು ಸಾಧ್ಯವಿರದಷ್ಟು ಅವರ ಬದುಕು ಜಟಿಲವಾಗಿರುತ್ತದೆ. ಅದೃಷ್ಟವಶಾತ್ ಬಹುಸಂಖ್ಯಾತ ಜನರಿಗೆ ಸಾಕಷ್ಟು ಐಶ್ವರ್ಯವೇ ಇಲ್ಲದಿರುವುದರಿಂದ ಸರಳತೆಯ ತತ್ವದಿಂದ ದೂರ ಸರಿಯಲು ಬಹು ಸಂಖ್ಯಾತ ಜನರಿಗೆ ಐಶ್ವರ್ಯವೂ ಇಲ್ಲ ಅಥವಾ ಅವರ ಕಡು ಬಡತನದಲ್ಲಿರುವುದರಿಂದ ಅದನ್ನು ಅರ್ಥ ಮಾಡಿಕೊಳ್ಳುವ ಶಕ್ತಿಯೂ ಅವರಲ್ಲಿಲ್ಲ(ಫಾರ್ಚುನೇಟ್ಲಿ ಫಾರ್ ದಿ ಲಾರ್ಜೆಸ್ಟ್ ನಂಬರ್ ಆಫ್ ಪೀಪಲ್ ದೇರ್ ಈಸ್ ಮಚ್ ಆಫ್ ವೆಲ್ತ್ ದಟ್ ದೆ ಬಿಕಮ್ ಇಮ್ಯೂನ್ ಟು ದಿ ಟ್ರುತ್ ಆಫ್ ಸಿಂಪ್ಲಿಸಿಟಿ ನಾರ್ ದೆ ಇನ್ ಸಚ್ ಪೆನುರಿ ದಟ್ ದೆ ಲ್ಯಾಕ್ ದಿ ಕೆಪಾಸಿಟಿ ಟು ಅಂಡರ್‌ಸ್ಟ್ಯಾಂಡ್). ಒಂದು ವೇಳೆ ಶ್ರೀಮಂತರು ಸತ್ಯವನ್ನು ಕಂಡರೂ ಅದನ್ನು ಅರ್ಥ ಮಾಡಿಕೊಳ್ಳಲು ನಿರಾಕರಿಸುತ್ತಾರೆ. ಯಾಕೆಂದರೆ ಈ ದೇಶದ ಆತ್ಮದ ಸಂಪರ್ಕವನ್ನೇ ಅವರು ಕಳೆದುಕೊಂಡಿರುತ್ತಾರೆ.

ಒಂದಂತೂ ಸ್ಪಷ್ಟ, ಏನೆಂದರೆ ಮನುಷ್ಯನ ಘನತೆ ಸ್ವಾವಲಂಬಿಯಾದ ಸಮಾಜದಲ್ಲಿ ಮಾತ್ರ ಇರಲು ಸಾಧ್ಯ ಮತ್ತು ಆ ಸಮಾಜ ಕೈಗಾರಿಕಾ ಪ್ರಗತಿಯೆಡೆಗೆ ಸಾಗಿದಂತೆಲ್ಲಾ ಸಂಕಷ್ಟಕ್ಕೀಡಾಗುತ್ತದೆ. ಈ ಗುಡಿಸಲು ಸಮಾಜದ ಮೂಲಕವೇ ಸಂತೋಷ ಸಾಧ್ಯ ಎನ್ನುವುದನ್ನು ಸೂಚಿಸುತ್ತದೆ. ಸ್ವಾವಲಂಬನೆಯೇ ಇಲ್ಲಿ ಪ್ರಧಾನ. ಅಗತ್ಯವೇ ಇಲ್ಲದ ವಸ್ತು, ಸರಕುಗಳನ್ನು ಮನುಷ್ಯ ಪಡೆದಷ್ಟೂ ಪರಿಸರದಿಂದ ಸಂತೋಷವನ್ನು ಮೈಗೂಡಿಸಿಕೊಳ್ಳುವ ಅವನ ಶಕ್ತಿ ಕ್ಷೀಣಿಸುತ್ತದೆ. ಆದ್ದರಿಂದಲೇ ಗಾಂಧಿ ನಮ್ಮ ಅಗತ್ಯದ ಮಿತಿಯಲ್ಲೇ ಉತ್ಪಾದನೆಗಳಿರಬೇಕು ಎಂದು ಪದೇ ಪದೇ ಹೇಳುತ್ತಿದ್ದರು.

ಇಂದಿನ ಉತ್ಪಾದನೆಯ ವಿಧಾನ ಮಿತಿಮೀರಿದ್ದು ಅದು ತಡೆಯಿಲ್ಲದಂತೆ ಸಾಗಿದೆ. ಇವೆಲ್ಲವನ್ನೂ ನಾವು ಇದುವರೆಗೂ ಸಹಿಸಿಕೊಂಡು ಬಂದಿದ್ದೇವೆ, ಆದರೆ ಹೆಚ್ಚು ಹೆಚ್ಚು ಯಂತ್ರಗಳ ಅವಲಂಬನೆ ತನ್ನದೇ ಆತ್ಮ ಹತ್ಯೆಯ ಕಡೆಗೆ ಕೊಂಡೊಯ್ಯುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುವ ಕಾಲ ಕೂಡಿ ಬಂದಿದೆ. ನಾಗರಿಕ ಪ್ರಪಂಚ, ಅದು ಅಮೆರಿಕಾ ಅಥವಾ ಚೈನಾ ಯಾವುದೇ ಆಗಿರಲಿ, ನಾವು ಪ್ರಗತಿಯನ್ನು ಸಾಧಿಸುವ ದಾರಿ ಇದಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಆರಂಭಿಸಿವೆ. ವ್ಯಕ್ತಿ ಮತ್ತು ಸಮಾಜದ ಒಳಿತಿಗಾಗಿ ತಮ್ಮ ಆ ಕ್ಷಣದ ಅವಶ್ಯಕತೆಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಜನರು ತಮಗಾಗಿ ಇಟ್ಟುಕೊಂಡಿದ್ದರೆ ಕ್ಷೇಮ ಎನ್ನುವುದನ್ನು ಮನುಷ್ಯ ಅರಿತುಕೊಳ್ಳಬೇಕು. ಇಂದಿನ ಪ್ರಪಂಚದ ಮೌಲ್ಯಗಳನ್ನು ಬದಲಾಯಿಸುವಲ್ಲಿ ಯಾವ ವಿಧಾನದಿಂದ ಈ ರೀತಿಯ ಚಿಂತನಯನ್ನು ಕಾರ್ಯಗತಗೊಳಿಸಬಹುದು ಎನ್ನುವುದನ್ನು ಕಂಡುಕೊಳ್ಳಬೇಕಾಗಿದೆ. ಈ ಬದಲಾವಣೆ ಯಾವುದೇ ಸರ್ಕಾರ ಅಥವಾ ಕೇಂದ್ರೀಕೃತ ವ್ಯವಸ್ಥೆಯ ಒತ್ತಡದಿಂದ ಆಗುವಂಥದಲ್ಲ. ಮೂಲ ಸಮಾಜವನ್ನು ಯಾವುದು ರೂಪಿಸುತ್ತದೆ ಎಂಬುದನ್ನು ಜನ ಅರ್ಥ ಮಾಡಿಕೊಳ್ಳಬಲ್ಲ ಜನಾಭಿಪ್ರಾಯದ ಒಂದು ವಾತಾವರಣವನ್ನು ನಿರ್ಮಿಸಬೇಕು. ಇವತ್ತು ಮೋಟಾರು ಕಾರ್ ಹೊಂದಿರುವ ವ್ಯಕ್ತಿ ಬೈಸಿಕಲ್ ಹೊಂದಿದ ವ್ಯಕ್ತಿಗಿಂತ ತಾನು ಶ್ರೇಷ್ಠ ಎಂದುಕೊಳ್ಳುತ್ತಾನೆ, ಆದರೆ ಸಾಮನ್ಯರ ಮಾನದಂಡದಿಂದ ನೋಡಿದಾಗ ಬೈಸಿಕಲ್ಲೇ ಜನ ಸಾಮಾನ್ಯರ ವಾಹನವಾಗಿದೆ. ಆದ್ದರಿಂದ ಸೈಕಲ್ಲಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯಬೇಕು. ನಮ್ಮೆಲ್ಲ ರಸ್ತೆ–ಸಾರಿಗೆ ಯೋಜನೆಗಳು ಸೈಕಲ್ಲನ್ನು ಗಮನದಲ್ಲಿಟ್ಟುಕೊಂಡೇ ಯೋಜನೆಗಳನ್ನು ಮಾಡಬೇಕು. ಮೋಟಾರು ಕಾರಿಗೆ ಎರಡನೇ ಸ್ಥಾನವಿರಬೇಕು. ಆದರೆ ಈಗಿನ ಸಂದರ್ಭ ಮೋಟಾರು ಕಾರಿಗೆ ಮೊದಲ ಆದ್ಯತೆಯನ್ನು ನೀಡಿ ಎರಡನೆ ಸ್ಥಾನವನ್ನು ಸೈಕಲ್ಲಿಗೆ ನೀಡುವಂತಿದೆ. ಶ್ರೀಮಂತರಿಗೆ ಹೋಲಿಸಿ ಜನ ಸಾಮಾನ್ಯನನ್ನು ತಾತ್ಸಾರ ಮಾಡಲಾಗಿದೆ.

ಗಾಂಧೀಜಿಯ ಈ ಗುಡಿಸಲು ಜನ ಸಾಮಾನ್ಯನನ್ನು ಹೇಗೆ ಮುನ್ನೆಲೆಗೆ ತರಬಹುದು ಎನ್ನುವುದನ್ನು ಇಡೀ ಜಗತ್ತಿಗೇ ತೋರಿಸಿದೆ. ಇದು ಸಂತೋಷದ ಸಂಕೇತವೂ ಹೌದು, ಸರಳತೆ, ಸೇವೆ ಮತ್ತು ಸತ್ಯಪರಿಪಾಲನೆಯ ಮೂಲಕ ಅದನ್ನು ಪಡೆಯಬಹುದು. ಮೂರನೇ ಜಗತ್ತಿನ ಬಡ ಜನರ ಉದ್ಧಾರದ ಮಾರ್ಗಗಳ ಬಗ್ಗೆ ನೀವು ಆಯೋಜಿಸುತ್ತಿರುವ ಸಮ್ಮೇಳನದಲ್ಲಿ ಈ ಸಂದೇಶವನ್ನು ಪಾಲಿಸುವ ಪ್ರಯತ್ನವನ್ನು ಮಾಡುವಿರೆಂಬ ಭರವಸೆ ನನಗಿದೆ.

(ಪ್ರಜಾವಾಣಿ ಸಾಭಾರ)

ಸಾಮ್ಯಯೋಗ ಇಂದಿನ ಯುಗದ ಬ್ರಹ್ಮ

–ವಿನೋಬಾ

(ಸರ್ಕಾರದ ಕಾರಣದಿಂದಾಗಿಯೇ ಎಲ್ಲವೂ ಚೆನ್ನಾಗಿ ನಡೆಯುತ್ತದೆ ಎಂಬ ಭಾವನೆ ಒಂದು ದೊಡ್ಡ ಭ್ರಮೆ, ಸರ್ಕಾರದ ವಿಷಯವಾಗಿ ಇರುವ ಈ ಭ್ರಮೆಯೇ ಇಂದು ವಿಶ್ವಶಾಂತಿಗೆ ಅತ್ಯಂತ ದೊಡ್ಡ ಅಪಾಯವಾಗಿದೆ.)

ಇಂದು ಇಡೀ ಪ್ರಪಂಚದಲ್ಲಿ ಎರಡು ಪ್ರಕಾರದ ಸಂಸ್ಥೆಗಳು ಬಹು ಗಟ್ಟಿಯಾಗಿವೆ; ಒಂದನೇಯದು ಧರ್ಮಸಂಸ್ಥೆ ಮತ್ತು ಎರಡನೇಯದು ಶಾಸನ ಸಂಸ್ಥೆ. ಈ ಎರಡೂ ಸಂಸ್ಥೆಗಳು ಲೋಕಸೇವೆಯ ಉದ್ದೇಶದಿಂದ ರಚಿಸಲ್ಪಟ್ಟಿದ್ದವು. ಅವುಗಳ ರಚನೆಯಾದಾಗ ಸಮಾಜಕ್ಕೆ ಅವುಗಳ ಅಗತ್ಯವಿತ್ತು; ಆಗ ಅವುಗಳ ಉಪಯೋಗವೂ ಆಯಿತು.

ಆದರೆ ಈಗ ಆ ಎರಡೂ ಸಂಸ್ಥೆಗಳಿಂದ ಬಿಡುಗಡೆ ಹೊಂದುವುದು ಸಮಾಜಕ್ಕೆ ಅಗತ್ಯವಾಗಿದೆ. ಧರ್ಮದಿಂದ ಬಿಡುಗಡೆ ಹೊಂದಬೇಕೆಂದು ನಾನು ಹೇಳುತ್ತಿಲ್ಲ. ಧರ್ಮಸಂಸ್ಥೆಗಳಿಂದ ಬಿಡುಗಡೆ ಹೊಂದಬೇಕಾದ ಅಗತ್ಯವಿದೆಯೆಂದು ಹೇಳುತ್ತಿದ್ದೇನೆ ವ್ಯವಸ್ಥೆ ಮತ್ತು ಸಮಾಜಸೇವಾ ಯೋಜನೆಗಳ ಅಗತ್ಯವಿಲ್ಲವೆಂದೂ ಹೇಳುತ್ತಿಲ್ಲ ಸೇವೆಯ ಹೆಸರಿನಲ್ಲಿ ಯಾವೆಲ್ಲ ಶಾಸನಗಳು ನಡೆಯುತ್ತವೋ ಅವುಗಳಿಂದ ಬಿಡುಗಡೆ ಹೊಂದುವ ಅಗತ್ಯವಿದೆಯೆಂದು ಹೇಳುತ್ತೇನೆ. ನಾನು ಯೋಚಿಸಿದಷ್ಟೂ ನನ್ನ ದೃಢವಿಶ್ವಾಸವೇನೆಂದರೆ ಯಾವ ಒಳ್ಳೆಯ ಉದ್ದೇಶಗಳಿಂದ ಆ ಎರಡು ಸಂಸ್ಥೆಗಳು ಪ್ರಾರಂಭವಾದವೋ ಆ ಉದ್ದೇಶಗಳು ಪೂರ್ಣಗೊಂಡಿರುವುದರಿಂದ ಭವಿಷ್ಯದಲ್ಲಿ ಅವುಗಳಿಂದ ಲಾಭವಾಗುವುದರ ಬದಲು ಹಾನಿಯೇ ಆಗುವುದು.

ಯಾರು ಧರ್ಮದ ಮೇಲೆ ಶ್ರದ್ಧೆ ಇಟ್ಟಿಲ್ಲವೋ ಅವರಂತೂ ಶ್ರದ್ಧೆ ಇಡುವುದೇ ಇಲ್ಲ; ಆದರೆ ಯಾರು ಇಟ್ಟಿದ್ದಾರೋ ಅವರ ಶ್ರದ್ದೆ ಕೂಡ ನಿರ್ವೀರ್ಯವಾಗಿದೆ. ಅವರು ಧರ್ಮಕಾರ್ಯವನ್ನು ಕೆಲವು ಜನರ ಕೈಗೆ ಒಪ್ಪಿಸಿ ತಮ್ಮನ್ನು ತಾವೇ ಮುಕ್ತವಾಗಿರಿಸಿಕೊಂಡಿದ್ದಾರೆ. ಹೀಗೆ ಧರ್ಮವನ್ನೇ ಮುಗಿಸಿದ್ದಾರೆ. ನಾನು ನನ್ನ ನಿದ್ರೆಮಾಡುವ ಹೊಣೆಯನ್ನು ಬೇರೆಯೊಬ್ಬ ಮನುಷ್ಯನಿಗೆ ವಹಿಸಿದೆಯೆಂದು ತಿಳಿಯಿರಿ. ಅದಕ್ಕಾಗಿ ಅವನಿಗೆ ಸಂಬಳ ಕೂಡ 'ಕೊಟ್ಟೆ, ಹಾಗೇ ಮಾಡಿದಲ್ಲಿ ನಾನು ನಿದ್ರೆ ಮಾಡದೇ ಇದ್ದರೆ ನಡೆಯುತ್ತದೆಯೇ? ನನ್ನ ನಿದ್ರೆಯನ್ನು ನಾನೇ

ಮಾಡಬೇಕಾಗುತ್ತದೆ. ಅದರ ಹೊಣೆಯನ್ನು ನಾನು ಬೇರೆಯವರಿಗೆ ಒಪ್ಪಿಸಲಾಗುವುದಿಲ್ಲ.

ಧರ್ಮಸಂಸ್ಥೆಗಳದು ಯಾವ ಪರಿಸ್ಥಿತಿ ಇದೆಯೋ ಅದೇ ಪರಿಸ್ಥಿತಿ ಶಾಸನ ಮತ್ತು ಸಮಾಜ ಸೇವೆಯ ಬಗ್ಗೆಯು ಇದೆ. ನಾವು ಈ ಭಾರವನ್ನು ಆಯ್ಕೆಯಾದ ಕೆಲ ಪ್ರತಿನಿಧಿಗಳ ಮೇಲೆ ಹಾಕಿದ್ದೇವೆ ಮತ್ತು ನಾವು ಆರಾಮಾಗಿದ್ದುಕೊಂಡು ತಿನ್ನುತ್ತೇವೆ, ಕುಡಿಯುತ್ತೇವೆ ಮತ್ತು ಮಲಗುತ್ತೇವೆ! ಯಾವ ಜನರು ತಮ್ಮ ಶಾಸನ ಮತ್ತು ಸೇವೆಯ ಭಾರವನ್ನು ಕೆಲವೇ ಪ್ರತಿನಿಧಿಗಳ ಮೇಲೆ ಹೊರೆಸುತ್ತಾರೋ, ಧರ್ಮ ಮತ್ತು ಚಿಂತನೆಯ ಹೊಣೆಗಾರಿಕೆಯನ್ನು ಕೆಲವೆ ಜನರಿಗೆ ಕೊಡುತ್ತಾರೋ ಆ ಪ್ರತಿನಿಧಿಗಳು ಎಷ್ಟೇ ತಮ್ಮ ಹೊಣೆಗಾರಿಕೆಯನ್ನು ಚೆನ್ನಾಗಿ ನಿರ್ವಹಿಸಿದರು ಕೂಡ ಉಳಿದ ಜನರು ಪೂರ್ಣವಾಗಿ ಪರುಷಾರ್ಥಹೀನರೂ, ನಿಃಸ್ಸಾರರೂ, ಆಗುತ್ತಾರೆ. ಅವರ ಜೀವನದಲ್ಲಿ ಯಾವುದೇ ಪ್ರಾಣತತ್ವ ಇರುವುದಿಲ್ಲ.

ಇಂದಿನ ಸರ್ಕಾರಗಳು ಕೆಲ ತಪ್ಪು ಕೆಲಸಗಳನ್ನು ಮಾಡುತ್ತಿವೆ, ಇನ್ನು ಕೆಲವು ಒಳ್ಳೆ ಕೆಲಸಗಳನ್ನೂ ಮಾಡುತ್ತಿವೆ. ಅವು ಮಾಡುವ ತಪ್ಪು ಕೆಲಸಗಳ ಪರಿಣಾಮ ಜಗತ್ತಿನಾದ್ಯಂತ ಬಹಿರಂಗವಾಗುತ್ತದೆ. ಒಳ್ಳೆಯ ಕೆಲಸಗಳಿಂದ ಸಮಾಜದ ಬುದ್ಧಿಯ ಮೇಲೆ ಪ್ರಭಾವ ಬೀಳುತ್ತದೆ ಮತ್ತು ಜನರು ಸರ್ಕಾರದ ಉಪಕಾರದ ಭಾರದ ಕೆಳಗೆ ಒತ್ತಲ್ಪಡುತ್ತಾರೆ. ಕೆಲವರು ಉಪಕಾರ ಮಾಡುವುದು ಮತ್ತು ಉಳಿದವರೆಲ್ಲರೂ ಆ ಉಪಕಾರದ ಭಾರದ ಕೆಳಗೆ ಅದುಮಲ್ಪಡುವುದು ನಮ್ಮ ದುಃಖಕ್ಕೆ ಕಾರಣ, ಚಿಕ್ಕಮಕ್ಕಳ ಹೊಣೆಗಾರಿಕೆ ತಂದೆತಾಯಿಗಳ ಮೇಲೆ ಇರಬೇಕಾದುದು ಸರಿ. ಆದರೆ ನೂರಾರು ವರ್ಷಗಳ ಹಳೆಯ ಸಂಸ್ಥೆಗಳ ಸೇವೆಯ ನಂತರವೂ ನಾವು ಮಕ್ಕಳಂತಯೇ ಇರಬೇಕೆ? ಸಾವಿರಾರು ವರ್ಷಗಳಿಂದ ಜ್ಞಾನದ ಪರಂಪರೆ ನಡೆದು ಬಂದಿರುವಾಗ ಪ್ರತಿಯೊಬ್ಬ ಮನುಷ್ಯ ತನ್ನ ಜ್ಞಾನ ಮತ್ತು ತನ್ನ ಧರ್ಮದ ವ್ಯವಹಾರವನ್ನು ತನ್ನ ಕೈಗೆ ತೆಗೆದುಕೊಳ್ಳುವುದೇ ಒಳ್ಳೆಯದು ಎಂಬುದನ್ನು ನಾವು ತಿಳಿಯಬೇಕು.

ಸರ್ಕಾರ ತಪ್ಪು ಕೆಲಸ ಮಾಡಿದಾಗ ನೀವು ಅದರ ವಿರುದ್ಧ ಗಟ್ಟಿಯಾದ ಧ್ವನಿ ಏಕೆ ಎತ್ತುವುದಿಲ್ಲ ಎಂದು ಕೆಲವರು ಕೇಳುತ್ತಾರೆ. ನಾನು ಸರ್ಕಾರದ ವಿರುದ್ಧಗಟ್ಟಿ ಧ್ವನಿ ಎತ್ತುತ್ತೇನಾದರೂ ಕೆಲವೊಂದು ಸಲ ಅಗತ್ಯವಾದಾಗ ಹೇಳುವುದನ್ನು ಹೇಳಿಯೇಬಿಡುತ್ತೇನೆ ಬದಲಿಗೆ ಸರ್ಕಾರ ಕೆಲ ಒಳ್ಳೆಯ ಕೆಲಸ ಮಾಡುತ್ತಿದೆ ಎಂದು ಗೊತ್ತಾದಾಗ ಅದರ ವಿರುದ್ಧ ಧ್ವನಿ ಎತ್ತುವುದು ನನಗೆ

ಅಗತ್ಯವಾಗುತ್ತದೆ!! ಸಕಾರದ ತಪ್ಪು ಕೆಲಸದ ವಿರುದ್ಧ ಧ್ವನಿ ಎತ್ತಲು ನನ್ನ ಅಗತ್ಯವಿಲ್ಲ. ಆದರೆ ಅದರ ಒಳ್ಳೆಯ ಕೆಲಸಗಳ ವಿರುದ್ಧ ಧ್ವನಿ ಎತ್ತುವುದಕ್ಕಾಗಿ ನನ್ನ ಅಗತ್ಯವಿದೆ. "ನೀವು ಕುರಿಗಳಾಗುತ್ತಿದ್ದೀರಿ" ಎಂದು ಜನರಿಗೆ ಹೇಳುವ ಅಗತ್ಯವಿದೆ. ನೀವು ಕುರಿಗಳಾಂತಾಗಿ ಕುರುಬ ನಮಗೆ ಬಹಳ ಒಳ್ಳೆಯ ವ್ಯವಸ್ಥೆ ಮಾಡಿದ್ದಾನೆ ಎಂದು ಹೇಳುತ್ತಿದ್ದೀರಿ. ಇದು ಸಂತೋಷಪಡುವ ಮಾತೇ? ಆದ್ದರಿಂದ ನಮ್ಮ ಧ್ವನಿ ಸುಶಾಸನದ ವಿರುದ್ಧ ಏಳುತ್ತದೆ. ಯಾರಾದರು ನಮ್ಮ ಮೇಲೆ ಒಳ್ಳೆಯ ಶಾಸನ ನೆಡೆಸಿ ನಾವು ಶಾಶಿತರಾಗುವುದೇ ನನಗೆ ಕೆಟ್ಟದ್ದು ಅನಿಸುತ್ತದೆ.

ಧರ್ಮ ಮತ್ತು ಸಮಾಜದ ವ್ಯವಸ್ಥೆ ಜೀವನದ ಎರಡು ದೊಡ್ಡ ಕೆಲಸಗಳು. ಅವುಗಳನ್ನು ನಾವು ಪ್ರತಿನಿಧಿಗಳ ಮೇಲೆ ಹಾಕಿದ್ದೇವೆ ಒಂದಕ್ಕೆ ದಕ್ಷಿಣೇಯ ರೂಪದಲ್ಲಿ ಮತ್ತು ಇನ್ನೊಂದಕ್ಕೆ ಟ್ಯಾಕ್ಸ್‌ರೂಫದಲ್ಲಿ ಹಣ ಕೊಡುತ್ತೇವೆ ನಾವು ನಮ್ಮ ಬುದ್ಧಿಯಿಂದ ಯೋಚಿಸುವ ಅಗತ್ಯವೇ ಇಲ್ಲವೆಂದು ತಿಳಿಯುತ್ತೇವೆ ಯಾವ ಕೆಲಸವನ್ನು ನಾವು ಸ್ವಯಂ ಮಾಡುವುದಿಲ್ಲವೋ ಅದನ್ನು ಮಾಡುವ ಜವಾಬ್ದಾರಿಯನ್ನು ಪ್ರತಿನಿಧಿಗಳಿಗೆ ಒಪ್ಪಿಸಿಬಿಡುತ್ತೇವೆ. ಆ ಕೆಲಸದ ಆನಂದ, ಅದರ ರುಚಿ ನಮಗೆ ದೊರೆಯುವುದಿಲ್ಲ ಸ್ವಯಂ ಕೆಲಸ ಮಾಡುವುದರಿಂದ ಆನಂದವು ಮತ್ತು ಶಕ್ತಿಯು ಹೆಚ್ಚುತ್ತದೆ.

ವಿದೇಶಗಳಲ್ಲಿ ಯಾರಾದರು ಕಾಯಿಲೆ ಬಿದ್ದರೆ ತಕ್ಷಣ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ ಅವನಿಗೆ ಉತ್ತಮ ಸೇವೆಯನ್ನು ಕೊಡುತ್ತಾರೆ ಮನೆಯವರಿಗೆ ಕಷ್ಟವೇ ಇರುವುದಿಲ್ಲ. ಇಂಥ ವ್ಯವಸ್ಥೆ ಅಲ್ಲಿ ಇದೆ. ಮನೆಮನೆಯಲ್ಲಿ ಇರುವ ತಂದೆ-ತಾಯಿ, ಹುಡುಗ, ಅಣ್ಣ-ತಂಗಿ ಸೇವೆ ಮಾಡಿದಾಗ ಆತ್ಮದ ಯಾವ ವಿಕಾಸವಾಗುತ್ತದೋ ಅದು ಆಸ್ಪತ್ರೆಯಲ್ಲಿ ಆಗುವುದಿಲ್ಲ.

ಸರ್ಕಾರ ಆಸ್ಪತ್ರೆಯನ್ನೇನೊ ಪ್ರಾರಂಭಿಸುತ್ತದೆ, ಆದರೆ ಅಲ್ಲಿ ಪ್ರೇಮಪೂರ್ವಕ ಸೇವೆಮಾಡುವುದನ್ನು ಕಲಿಸಲು ಸಾಧ್ಯವಾಗುವುದಿಲ್ಲ, ಸರ್ಕಾರ ಕಾಲೇಜು ಪ್ರಾರಂಭಿಸುತ್ತದೆ. ಆದರೆ ಜ್ಞಾನ ಲಾಲಸೆಯುನ್ನು, ನಿರಂತರ ಅಧ್ಯಯನಶೀಲತೆಯನ್ನು ನಿರ್ಮಾಣ ಮಾಡಲಾರದು. ಸಮಾಜದಲ್ಲಿ ಗುಣ-ವರ್ಧನೆ ಮಾಡುವುದು ಸರ್ಕಾರದ ಕೆಲಸವಲ್ಲ. ಗುಣ-ವರ್ಧನೆ ಮಾಡುವುದು ಸರ್ವಥಾ ಜನತೆಯು ಕೆಲಸ. ಗುಣ-ವರ್ಧನಾವಾದಾಗಲೇ ದೇಶ ವಿಕಾಸವಾಗುವುದು. ಜನತೆಗೆ ಈ ನಿಜದ, ತಮ್ಮ ಈ ಕರ್ತವ್ಯದ ತಿಳುವಳಿಕೆ ಆಗಬೇಕು.

ನೀವು ಯಾವುದನ್ನು ಸುಶಾಸನ ಅನ್ನುತ್ತೀರೋ ಅದು ಶಸ್ತ್ರಾರೂಢವಾಗಿದೆ. ಲೋಕತಂತ್ರದ ಆಧಾರ ಸೈನ್ಯವಾಗಿದ್ದರೆ ಅದರ ರೂಪಾಂತರ ಸೈನ್ಯಶಾಹಿ ಆಗುವುದರಲ್ಲಿ ಎಷ್ಟು ಹೊತ್ತು ಬೇಕು? ಇಂಥ ಪರಿಸ್ಥಿತಿಯಲ್ಲಿ ಸುಶಾಸನದ ರೂಪಾಂತರ ಒಂದೇ ಒಂದು ಕ್ಷಣದಲ್ಲಿ ದುಶಾಸನವಾಗಬಹುದು. ಸೈನ್ಯಶಾಹಿ ಶಾಸನ ಸುಶಾಸನವಾಗಿದ್ದರೂ ಅದು ಸುಶಾಸನವಲ್ಲ ಏಕೆಂದರೆ ಅದರಲ್ಲಿ ನಾವೆಲ್ಲರೂ ಯಂತ್ರದ ಹಾಗೇ ಜಡವಾಗುತ್ತೇವೆ, ಯಾವ ಶಾಸನದಲ್ಲಿ ಮನುಷ್ಯನ ಬುದ್ಧಿಮಂತೆ ವಿಕಾಸವಾಗುವುದಿಲ್ಲವೋ, ಆತ್ಮ ಬುದ್ಧಿಜಾಗೃತವಾಗುವುದಿಲ್ಲವೋ, ಅಲ್ಲಿ ಸ್ವಯಂಬುದ್ಧಿ, ಸ್ವಯಂಪ್ರಜ್ಞೆಯ ಉದಯವಾಗುವುದಿಲ್ಲ. ಆ ಯೋಜನೆ ಎಷ್ಟೇ ಸುಖದಾಯಿ ಆಗಿದ್ದರೂ ವಿಕಾಸದ ದೃಷ್ಟಿಯಿಂದ ಅದು ಉಪಯೋಗವಿಲ್ಲ, ಆದ್ದರಿಂದ ಅದನ್ನು ಸರ್ವೋತ್ತಮ ವ್ಯವಸ್ಥೆಯೆಂದು ಹೇಳಲಾಗದು.

ಸರ್ಕಾರ ಎಷ್ಟೊಂದು ಭಯಾನಕ ವಸ್ತುವೆಂದರೆ ಅದಕ್ಕಿಂತ ಹೆಚ್ಚಿನ ಭಯಾನಕ ವಸ್ತು ಬೇರೊಂದಿಲ್ಲ ಈಗ ಇರುವಷ್ಟು ಬಲಾಢ್ಯ ಸರ್ಕಾರ ಈ ಮೊದಲು ಎಂದೂ ಇರಲಿಲ್ಲ, ಅದು ಅಧಿಕಾರ ಕೆಲವೇ ಜನರ ಕೈಯಲ್ಲಿ ಇರುವಂತೆ ಮಾಡಿದ್ದರಿಂದ ಜನರು ಹತಾಶರಾಗಿದ್ದಾರೆ. ಸರ್ಕಾರ ಅಂದರೇನೇ ಸರ್ವಾಕಾರ! ಸರ್ವಾಕಾರದ ಅಪಭ್ರಂಶ ಸರ್ಕಾರ, ಅಂದರೆ ಎಲ್ಲವನ್ನೂ ಮಾಡುವಂಥದು ಎಲ್ಲವನ್ನೂ ಸರ್ಕಾರವೇ ಮಾಡಬೇಕು. ನೀವು ಕೇವಲ ಮದುವೆ ಆಗುವಿರಿ, ಸಂಸಾರ ಮಾಡುವಿರಿ, ಮತ್ತು ಸಾಯುವಿರಿ!!

ವಾಸ್ತವದಲ್ಲಿ ಜನತೆಗೆ ಸರ್ಕಾರದ ಯಾವ ಅಗತ್ಯವೂ ಇಲ್ಲ. ನೂರಾರು ಸಾಮ್ರಾಜ್ಯಗಳು ಬಂದವು, ಹೋದವೆಂಬುದನ್ನು ನಾವು ನೋಡಿದ್ದೇವೆ. ಆದರೆ ನಮ್ಮ ಜೀವನ ನಡೆಯುತ್ತಲೇ ಇದೆ. ಹಿಂದೂಸ್ಥಾನದ ಸಮಾಜ ಎಲ್ಲೆಲ್ಲಿ ಮುಂದುವರಿಯಿತೋ ಅಲ್ಲಿ ಸತ್ಪುರುಷರ ಮೂಲಕವೇ ಮುಂದುವರಿಯಿತೆಂಬುದನ್ನು ಇತಿಹಾಸ ನೋಡಿದಾಗ ಗೊತ್ತಾಗುತ್ತದೆ. ಬುದ್ಧ ಮಹಾವೀರ, ಕಬೀರ, ತುಳಿಸಿದಾಸರ ಪ್ರಭಾವ ಇಂದು ಕೂಡ ಭಾರತದ ಮೇಲೆ ಇರುವುದು ಕಾಣುತ್ತದೆ. ಚೈತನ್ಯ ಮಹಾಪ್ರಭು, ರಾಮಕೃಷ್ಣಪರಮಹಂಸ, ರವೀಂದ್ರನಾಥ್, ಮುಂತಾದವರ ಪ್ರಭಾವ ಬಂಗಾಳದ ಮೇಲೆ ಆಗಿದೆ. ಅದೇ ರೀತಿ ಶಂಕರ ಮತ್ತು ರಾಮಾನುಜ, ಮಾಣಿಕ್ಯ ವಾಚ್‌ಕರ್ ಮತ್ತು ನಮ್ಮಳ್ವಾರರ ಪ್ರಭಾವ ತಮಿಳುನಾಡಿನ ಜನರ ಮೇಲೆ ಆಗಿದೆ. ಇಷ್ಟೊಂದು ಪ್ರಭಾವ ಯಾವುದೇ ಪಾಡ್ಯ, ಪಲ್ಲವ, ಚೋಳ, ರಾಜರದಾಗಿಲ್ಲ. ಪಿನಲ್‌ಕೋಡ್‌ನಲ್ಲಿ ಕಳ್ಳತನ ಮಾಡಿದರೆ ಶಿಕ್ಷೆ ಇದೆಯೆಂಬ ಕಾರಣಕ್ಕಾಗಿ ಜನರು ಕಳ್ಳತನ ಮಾಡುವುದಿಲ್ಲವೆಂದು

ತಿಳಿದಿದ್ದಿರಾ? ಕಳ್ಳತನಕ್ಕಾಗಿ ಶಿಕ್ಷೆವಿಲ್ಲವೇಂದರೆ ಆಗ ಎಷ್ಟು ಜನರು ಕಳ್ಳತನ ಮಾಡಲು ಪ್ರಾರಾಂಭಿಸುವರು? ಕಳ್ಳತನ ಮಾಡಬಾರದು ಎಂದು ನಮ್ಮ ವಿವೇಕಬುದ್ಧಿ ಹೇಳುತ್ತದೆ. ಆ ವಿವೇಕಬುದ್ಧಿಯನ್ನು ಯಾವ ರಾಜ ಕೊಟ್ಟಿದ್ದಾನೆ?

ಈ ಕಾರಣದಿಂದಾಗಿಯೇ ನಾನು ಒಂದು ಸಲಹೆಯನ್ನು ಕೊಟ್ಟಿದ್ದೇನೆ ಸ್ವಲ್ಪ ಸಮಯ ನಾವು ಸರ್ಕಾರಕ್ಕೂ ಮತ್ತು ಅದರ ಕಾನೂನುಗಳಿಗೂ ರಜೆ ಕೊಟ್ಟೆವು ಎಂದು ತಿಳಿಯಿರಿ. ಆಗ ಯಾವ ಕಷ್ಟಗಳು ಉಂಟಾಗುವವು? ರಾಜ್ಯವಾಳುವವರಿಗೆ ಎರಡು ವರ್ಷ ರಜೆಕೊಟ್ಟು ನೋಡೋಣ. ಅವರ ಹೊರ್ತಾಗಿಯೂ ಯಾವ ಯಾವ ಅವ್ಯವಸ್ಥೆ ಆಗುವವು? ರೈತರು ವ್ಯವಸಾಯ ಮಾಡುವುದಿಲ್ಲವೆ? ಜನರು ಮದುವೆ ಅಗುವುದಿಲ್ಲವೆ? ತಾಯಿ ಮಗುವಿಗೆ ಹಾಲು ಕುಡಿಸುವುದಿಲ್ಲವೆ? ನಿಜ ಹೇಳಬೇಕೆಂದರೆ ಸರ್ಕಾರ ಒಂದು ವೇಳೆ ಎರಡು ವರ್ಷಗಳ ರಜೆತೆಗೆದುಕೊಂಡರೆ ಜನರ ಭ್ರಮೆ ನಿರಸನವಾಗುವುದು. ಆಳುವವರವರ ಹೊರತಾಗಿಯೂ ಜಗತ್ತು ನಡೆಯುತ್ತದೆ, ಹೌದು, ಒಂದು ವೇಳೆ ಸೂರ್ಯನಾರಾಯಣ ಹುಟ್ಟದಿದ್ದರೆ ಮೇಲಿನಿಂದ ಪರಮೇಶ್ವರನ ಕೃಪೆಯ ಮಳೆ ಬೀಳದಿದ್ದರೆ ಜಗತ್ತು ಮುಗಿದು ಬಿಡುವುದು ಆದ್ದರಿಂದ ಸರ್ಕಾರದ ಕಾರಣದಿಂದಾಗಿಯೇ ಎಲ್ಲವೂ ಚೆನ್ನಾಗಿ ನಡೆಯುತ್ತದೆ ಎಂಬ ಭಾವನೆ ಒಂದು ದೊಡ್ಡ ಭ್ರಮೆ, ಸರ್ಕಾರದ ವಿಷಯವಾಗಿ ಇರುವ ಈ ಭ್ರಮೆಯೇ ಇಂದು ವಿಶ್ವಶಾಂತಿಗೆ ಅತ್ಯಂತ ದೊಡ್ಡ ಅಪಾಯವಾಗಿದೆ.

ಮೈತ್ರಿ ಸಾಭಾರ **ಅನು, ಸು.ಕೌ.**

ಪ್ರಚಲಿತ ಸಮಸ್ಯೆಗಳಿಗೆ ಗಾಂಧೀ ಮಾರ್ಗದಿಂದ ಪರಿಹಾರ

– ಡಾ॥ ಕೆ. ಜಗದೀಶ ಪೈ

ನೂರಾರು ವರ್ಷಗಳ ಹಿಂದೆ ನಡೆದ ಘಟನೆ ಇದು. ಒಬ್ಬ ವಿದೇಶಿ ಯಾತ್ರಿಕ ಈ ದೇಶವನ್ನು ನೋಡಲು ಬಂದಿದ್ದ ಆಗಿನ ಕಾಲದಲ್ಲಿ ಈಗಿನಂತೆ ಸಂಚಾರಕ್ಕೆ ಯಾವುದೇ ರೀತಿಯ ವೇಗದ ವಾಹನ ಇರಲಿಲ್ಲ. ಸಂಚಾರವನ್ನು ಬರಿ ಕಾಲ್ನಡಿಗೆಯಲ್ಲೇ ಮಾಡಬೇಕಾಗಿತ್ತು. ಹೀಗೆ ಆ ವಿದೇಶಿ ಯಾತ್ರಿಕ ಈ ದೇಶವನ್ನು ಕಾಲ್ನಡಿಗೆಯಲ್ಲಿ ಸುತ್ತುತ್ತಾ ಇರುವಾಗ ಒಮ್ಮೆ ಆತನಿಗೆ ಬಾಯಾರಿಕೆಯಾಯಿತು. ನೀರು ಎಲ್ಲಿಯಾದರೂ ಸಿಗಬಹುದೇ ಎಂಬುದಾಗಿ ಸುತ್ತ ಮುತ್ತ ನೋಡುತ್ತಿರುವಾಗ ದೂರದಲ್ಲಿ ಒಂದು ಮನೆ ಕಾಣಿಸಿತ್ತು. ಆ ಮನೆಯ ಹತ್ತಿರ ಹೋಗಿ ಹೊರಗಿನಿಂದಲೇ 'ಅಮ್ಮ, ಬಾಯಾರಿಕೆಯಾಗುತ್ತಿದೆ. ಕುಡಿಯಲು ಸ್ವಲ್ಪ ನೀರು ಕೊಡುತ್ತಿರಾ? ಅಂತ ಕೇಳಿದ. ಆ ಮನೆಯಲ್ಲಿ ಹದಿನಾರು ವರ್ಷದ ಹುಡುಗಿಯೊಬ್ಬಳನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ಆಕೆ ಆ ವಿದೇಶಿ ಯಾತ್ರಿಕನನ್ನು ಮನೆಯೊಳಗೆ ಆದರದಿಂದ ಬರಮಾಡಿಕೊಂಡು ಕುಳ್ಳಿರಿಸಿ ಅಡುಗೆ ಕೋಣೆಗೆ ಹೋಗಿ ಒಂದು ಬಿಸಿ ಲೋಟ ಬಿಸಿ ಹಾಲನ್ನು ತಂದುಕೊಟ್ಟಳು. ಆಗ ಯಾತ್ರಿಕ, 'ನೋಡಮ್ಮ, ನನಗೆ ತುಂಬಾ ಬಾಯಾರಿಕೆಯಾಗುತ್ತಿದೆ. ಈ ಬಿಸಿ ಹಾಲಿಗಿಂತ ಒಂದು ಲೋಟ ತಣ್ಣಗಿರುವ ನೀರು ಕೊಡಿ' ಎಂದ ಆ ಹುಡುಗಿ ತಿರುಗಿ ಅಡುಗೆ ಕೋಣೆಗೆ ಹೋಗಿ ಒಂದು ಲೋಟ ದಪ್ಪ ಮೊಸರನ್ನು ತಂದು ಕೊಟ್ಟಳು. ನನ್ನ ಬಾಯಾರಿಕೆ ಬಿಸಿ ಹಾಲಿನಿಂದಾಗಲಿ, ದಪ್ಪ ಮೊಸರಿನಿಂದಾಗಲಿ ಹೋಗುವುದಿಲ್ಲ. ದಯವಿಟ್ಟು ಸ್ವಲ್ಪ ನೀರು ಕೊಡಿ' ಎಂದ ಯಾತ್ರಿಕ. ಆಗ ಆಕೆ ಒಂದು ಕೈಯಲ್ಲಿ ಮಜ್ಜಿಗೆ, ಇನ್ನೊಂದು ಕೈಯಲ್ಲಿ ನಿರನ್ನು ತಂದು ಯಾತ್ರಿಕನಿಗೆ ಕೊಡುತ್ತಾ ಹೇಳಿದಳು; "ನೋಡಿ ಈ ದೇಶದಲ್ಲಿ ಮನೆಗೆ ಬಂದ ಅತಿಥಿಗಳಿಗೆ ಬರಿ ನೀರು ಕೊಟ್ಟು ಉಪಚರಿಸುವ ಪದ್ಧತಿ ಇಲ್ಲ. ದಯವಿಟ್ಟು ಈ ನಿರಿನೊಂದಿಗೆ ಮಜ್ಜಿಗೆಯನ್ನು ಸ್ವೀಕರಿಸಿ".

ಇದೊಂದು ನೂರಾರು ವರ್ಷಗಳ ಹಿಂದೆ ನಡೆದ ಘಟನೆಯಾದರೆ, ಕೆಲವೂ ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ನಡೆದ ಇನ್ನೊಂದು ಘಟನೆಯನ್ನು

ಉಲ್ಲೇಖಿಸಬಹುದು. ಆಂಧ್ರ ಪ್ರದೇಶದ ಒಂದು ಊರಿನಲ್ಲಿ ಒಮ್ಮೆ ಮಕ್ಕಳ ಕಳ್ಳತನವಾಯಿತು. ಈ ಮಕ್ಕಳ ಕಳ್ಳತನ ಯಾರಿಂದ ಯಾವಾಗ ಏಕಾಗಿ ಆಗುತ್ತಿದೆ ಎನ್ನುವುದು ಆ ಊರಿನವರಿಗೆ ಗೊತ್ತಾಗಲಿಲ್ಲ. ಅಂತೂ ಮೇಲಿಂದ ಮೇಲೆ ಕೆಲವೂ ಮಕ್ಕಳು ಕಾಣದಾದರು ಊರಿನ ಜನರೆಲ್ಲ ಪೊಲೀಸರ ಮೊರೆಹೊಕ್ಕರು. ಪೊಲೀಸರಿಗೂ ಮಕ್ಕಳ ಕಳ್ಳರ ಬಗ್ಗೆ ಸುಳಿವೂ ಸಿಗಲಿಲ್ಲ. ಇಂತಹ ಆತಂಕದ ವಾತಾವರಣದಲ್ಲಿ ಆ ಊರಿಗೆ ಒಬ್ಬ ಅಪರಿಚಿತ ಬಂದ. ಆತನನ್ನೂ ಊರಿನವರೆಲ್ಲರೂ ವಿಚಿತ್ರ ದೃಷ್ಠಿಯಿಂದ ನೋಡಿದರು. ಕೆಲವರಿಗೆ ಈತನೇ ಮಕ್ಕಳ ಕಳ್ಳನಿರಬಹುದೇ ಎಂಬ ಸಂಶಯ ಬಂತು. ಕೆಲವರ ಬಾಯಿಂದ ಈ ಸಂಶಯವೇ ಸಶಬ್ಧವಾಗಿ 'ಮಕ್ಕಳ ಕಳ್ಳ' ಎಂಬ ಉದ್ಗಾರ ಬಂತು. 'ಮಕ್ಕಳ ಕಳ್ಳ' ಎಂಬ ಶಬ್ಧ ಕಿವಿಗೆ ಬಿದ್ದ ತಕ್ಷಣ ಊರ ಜನರೆಲ್ಲರೂ ಒಟ್ಟಾದರು. ಆ ಅಪರಿಚಿತ ವ್ಯಕ್ತಿಯನ್ನು ಹಿಡಿದರು, ಕೆಲವರು ಹೊಡೆದರು, ಬಡಿದರು, ಊರ ಜನರ ಗುಮಾನಿಯ ಮಧ್ಯದಲ್ಲಿ, ಗುದ್ದಾಟದ ನಡುವಿನಲ್ಲಿ ಆ ಅಪರಿಚಿತ ವ್ಯಕ್ತಿಯ ಮಾತನ್ನು ಕೇಳುವವರೇ ಇಲ್ಲವಾದರು. ಆತನನನ್ನು ನಾಡಿನ ಜನರೆಲ್ಲಾ ಸೇರಿ ಕಾಡಿನ ಹುಲಿಯಂತೆ ಹರಿದು ಹಂಚಿ ಹಾಕುತ್ತಿರುವಾಗ ಪೋಲಿಸರು ಬಂದರು, ಜನರೆಲ್ಲಾ ದೂರ ಸರಿದರು. ಆದರೆ ಅಷ್ಟರೊಳಗೆ ಆ ಅಪರಿಚಿತ ವ್ಯಕ್ತಿ ಇಹಲೋಕ ತ್ಯಜಿಸಿದ್ದ. ಆ ಮೇಲೆ ಪೋಲಿಸರ ತನಿಖೆಯಿಂದ ತಿಳಿದು ಬಂದದ್ದೇನೆಂದರೆ ಆ ಅಪರಿಚಿತ ವ್ಯಕ್ತಿ ಪಕ್ಕದ ಇನ್ನೊಂದು ಊರಿನ ಸಂಭಾವಿತ ಮನುಷ್ಯನಾಗಿದ್ದ. ಆತನಿಗೂ ಮಕ್ಕಳ ಕಳ್ಳತನಕ್ಕೂ ಯಾವುದೇ ಸಂಬಂಧವಿರಲಿಲ್ಲ. ಆ ದಿನ ಯಾವುದೊ ಕೆಲಸದ ನಿಮಿತ್ತ ಆ ಊರಿಗೆ ಬಂದಿದ್ದನಾತ.

ಈ ಎರಡು ಘಟನೆಗಳು ಈ ದೇಶದ ವಿಭಿನ್ನ ಕಾಲ ಘಟ್ಟದ ವಿಭಿನ್ನ ಸಂಸ್ಕೃತಿಯನ್ನು ಹೇಳುತ್ತದೆ. ಒಬ್ಬರೊಬ್ಬರನ್ನು ಸತ್ಕರಿಸುವ ಸಂಸ್ಕೃತಿಯಿಂದ ಒಬ್ಬರೊಬ್ಬರನ್ನು ಸಂಹರಿಸುವ ವಿಕೃತಿಯೆಡೆಗೆ ಬಂದಿದ್ದೇವೆ. ಒಬ್ಬರೊಬ್ಬರನ್ನು ಗೌರವಿಸುವ ನಾಡಿನಿಂದ ಒಬ್ಬರೊಬ್ಬರನ್ನು ಗುಮಾನಿಯಿಂದ ಕಾಣುವ ನಾಡಿಗೆ ನಾವೀಗ ಬಂದಿದ್ದೇವೆ. ಹೀಗೆ ನಾವು ಸಾಂಸ್ಕೃತಿಕ ಅಧಃಪತನದತ್ತ ಸಾಗುತ್ತಿದ್ದೇವೆ. ಉನ್ನತಿಯಿಂದ ಅವನತಿಯತ್ತ ಜಾರುತ್ತಿದ್ದೇವೆ.

ಇಂದು ನಮ್ಮ ಸಾರ್ವಜನಿಕ ಪ್ರಜ್ಞೆಯ ಮಂಕು ಕಳೆದಿದೆ. ಸಾರ್ವಜನಿಕ ಶಿಸ್ತು ಮಾಯಾವಾಗುತ್ತಿದೆ. ಮನೆಯಲ್ಲಿ ತೋರಿಸುವ ಸ್ವಚ್ಛತೆ ರಸ್ತೆಗೆ ಬಂದಾಗ ಮರೆಯುತ್ತೇವೆ. ರಸ್ತೆಯಲ್ಲಿ ಎಲ್ಲೆಂದರಲ್ಲಿ ಉಗುಳುವುದು, ಎಲ್ಲೆಂದರಲ್ಲಿ ಮೂತ್ರ ವಿಸರ್ಜಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ಯಥೇಚ್ಛವಾಗಿ ಧೂಮಪಾನ ಮಾಡುವುದು.ಇವು ದೇಶದ ಉದ್ದಗಲಕ್ಕೂ ಕಂಡುಬರುವ ದೃಶ್ಯ.

ಪುರಸಭೆ, ನಗರ ಸಭೆ, ಮಹಾನಗರಪಾಲಿಕೆಗಳಲ್ಲಿ ಕಸಬಿಸಾಡಲು ಪ್ರತ್ಯೇಕ ನಿಗಧಿತ ಸ್ಥಳವಿದ್ದರೂ ಅನೇಕರು ಇದನ್ನು ಉಪಯೋಗಿಸುವುದಿಲ್ಲ. ತಿಂದ ತಿಂಡಿಯ ಪೊಟ್ಟಣವನ್ನು ಹಣ್ಣಿನ ಸಿಪ್ಪೆಯನ್ನು ಕುಡಿದು ಖಾಲಿಯಾದ ಬಾಟಲಿಯನ್ನು ಎಲ್ಲೆಂದರಲ್ಲಿ ಬಿಸಾಡುತ್ತಾರೆ. ಚಲಿಸುತ್ತಿರುವ ಬಸ್ಸಿನಿಂದ ಜಗಿದ ಎಲೆ ಅಡಿಕೆಯನ್ನು ರಸ್ತೆಗೆ ಉಗುಳುತ್ತಾರೆ. ಬೇರೆಯವರಿಗೆ ಇದರಿಂದ ತೊಂದರೆಯಾಗುತ್ತದೆ ಎಂಬ ಕನಿಷ್ಠ ಸಾಮಾಜಿಕ ಪ್ರಜ್ಞೆ ಇವರಲ್ಲಿರುವುದಿಲ್ಲ. ಪರಿಣಾಮವಾಗಿ ಇವತ್ತು ಈ ದೇಶದ ಬಹುತೇಕ ತೀರ್ಥಕ್ಷೇತ್ರ, ಪ್ರವಾಸಿ ಕ್ಷೇತ್ರಗಳು ಗಬ್ಬುನಾತದಿಂದ ತುಂಬಿ ಹೋಗಿದೆ.

ನಾವು ಇವತ್ತು ನಮ್ಮ ಮಂತ್ರಿಗಳನ್ನು ಶಪಿಸುತ್ತೇವೆ. ಕಳ್ಳರು, ಸುಳ್ಳರು, ವಚನ ಭ್ರಷ್ಟರು, ಭ್ರಷ್ಟಚಾರಿಗಳು ಎಂಬಿತ್ಯಾದಿ ಆಪಾದನೆಯನ್ನು ಅವರ ಮೇಲೆ ಹೊರಿಸುತ್ತೇವೆ. ಆದರೆ ಚುನಾವಣಾ ಸಂದರ್ಭದಲ್ಲಿ ಒಳ್ಳೆಯ ವ್ಯಕ್ತಿಗಳನ್ನು ಆಯ್ಕೆ ಮಾಡಿ ಕಳುಹಿಸುವಲ್ಲಿ ನಾವು ವಿಫಲರಾಗುತ್ತೇವೆ. 'ಮತದಾನದಿಂದ ಏನೂ ಪ್ರಯೋಜನವಿಲ್ಲ' ಎಂಬುದಾಗಿ ನಮ್ಮ ಅಮೂಲ್ಯ ಮತವನ್ನೇ ಚಲಾಯಿಸುವುದಿಲ್ಲ. ಮತವನ್ನು ಚಲಾಯಿಸದೆ ಇರುವಲ್ಲಿ ಬಹುಪಾಲು ಶಿಕ್ಷಿತರೇ ಆಗಿರುತ್ತಾರೆ ಎಂಬುದು ಬಹಳ ಬೇಸರದ ಸಂಗತಿ.

ನಾವು ಈ ದೇಶದ ಎಲ್ಲಾ ವ್ಯವಸ್ಥೆಗಳ ಬಗ್ಗೆ ಆಕ್ಷೇಪ ತೆಗೆಯುತ್ತೇವೆ. ಇಲ್ಲಿಯ ಸರಕಾರ ಅಸಮರ್ಥ, ನಮ್ಮ ಕಾನೂನುಗಳ ಬಹಳ ಹಳೆಯವು, ಮುನಿಸಿಪಾಲಿಟಿ ಕಸ ಎತ್ತುವುದಿಲ್ಲ, ಫೋನುಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ರೈಲ್ವೆಯಲ್ಲಿ ಸಮಯ ಪಾಲನೆ ಇಲ್ಲ. ವಿಮಾನ ಸಂಚಾರ ನಗೆಪಾಟಲಾಗಿದೆ. ಅಂಚೆಯಂತೂ ಜಗತ್ತಿನಲ್ಲೆ ಕಳಪೆ. ಹೀಗೆ ಇಲ್ಲಿ ಯಾವೂದೂ ಸರಿ ಇಲ್ಲ ಎನ್ನುತ್ತೇವೆ. ಎಲ್ಲವೂ ಅಸ್ತವ್ಯಸ್ತವಾಗಿದೆ ಎಂದು ಗೊಣಗುತ್ತೇವೆ.

ಈ ಎಲ್ಲ ಆಕ್ಷೇಪ, ದೂರುಗಳ ಬಗ್ಗೆ ಭೂತಪೂರ್ವ ರಾಷ್ಟ್ರಪತಿಗಳಾದ ಡಾ॥ ಎ.ಪಿ.ಜೆ ಅಬ್ದುಲ್ ಕಲಾಂರವರು ಒಮ್ಮೆ ಒಂದು ಸಭೆಯಲ್ಲಿ ಮಾರ್ಮಿಕವಾಗಿ ಉತ್ತರಿಸಿದ್ದರು; "ಸಿಂಗಾಪುರಕ್ಕೆ ಹೋಗುವ ಒಬ್ಬ ಭಾರತೀಯನನ್ನು ತೆಗೆದುಕೊಳ್ಳಿ. ಅವನ ಹೆಸರು ನಿಮ್ಮದೇ ಇರಲಿ. ಅವನು ನೀವೇ ಎಂದು ತಿಳಿದುಕೊಳ್ಳಿ.

ನೀವು ಸಿಂಗಾಪುರ ವಿಮಾನ ನಿಲ್ದಾಣದ ಹೊರಗೆ ಬರುತ್ತೀರಿ. ಇಲ್ಲಿಯಂತೆ ಅಲ್ಲಿ ನೀವು ಸಿಗರೇಟು ತುಂಡುಗಳನ್ನು ರಸ್ತೆಗೆ ಎಸೆಯುವುದಿಲ್ಲ. ಅವರ ಭೂಗತ ಸಂಚಾರ ವ್ಯವಸ್ಥೆಯ ಬಗ್ಗೆ ಅವರಷ್ಟೇ ನಿಮಗೂ ಹೆಮ್ಮೆ ಬರುತ್ತದೆ.

ಸುಮಾರು ೬೦ ರೂಪಾಯಿಗಳಷ್ಟು ಹಣ ತೆತ್ತು ಆರ್ಟ್‌ಡ್ರ್ ರೋಡಿನಲ್ಲಿ ಡ್ರೈವ್‌ಗೆ ಹೋಗುತ್ತೀರಿ. ದುಬಾಯಿಗೆ ಹೋದರೆ ರಮ್ಜಾನ್ ದಿನ ಹೊರಗೆ ತಿಂಡಿ ತಿನ್ನಲು ನಿಮಗೆ ಧೈರ್ಯ ಇಲ್ಲ. ಲಂಡನ್‌ಗೆ ಹೋದರೆ ಅಲ್ಲಿನ ಟೆಲಿಫೋನ್ ಎಕ್ಸ್‌ಚೇಂಜ್‌ನ ಕಾರಕೂನನಿಗೆ ತಿಂಗಳಿಗೆ ೧೦ ಪೌಂಡ್ ಕೊಟ್ಟು, ನಿಮ್ಮ ಟೆಲಿಫೋನ್ ಖರ್ಚನ್ನು ಬೇರೆಯವರ ತಲೆಗೆ ಕಟ್ಟುವಂತೆ ಹೇಳುವುದಿಲ್ಲ. ವಾಶಿಂಗ್‌ಟನ್‌ನಲ್ಲಿ ಗಂಟೆಗೆ ೫೫ ಮೈಲಿಗಿಂತ ಹೆಚ್ಚು ವೇಗದಲ್ಲಿ ಕಾರು ಓಡಿಸಲು ನಮಗೆ ಧೈರ್ಯವಿಲ್ಲ. ಅಲ್ಲಿನ ಟ್ರಾಫಿಕ್ ಪೋಲಿಸರಿಗೆ 'ನಾನು ಯಾರೆಂದು ಗೋತ್ತೇ ನಿನಗೆ?' ಎಂದು ಕೇಳುವುದಿಲ್ಲ. ಆಸ್ಟ್ರೇಲಿಯ, ನ್ಯೂಜಿಲ್ಯಾಂಡ್‌ಗೆ ಹೋಗಿ ಎಳನೀರು ಕುಡಿದರೆ ಕಸದ ಡಬ್ಬ ಬಿಟ್ಟು ಬೇರೆಲ್ಲೂ ಎಸೆಯುವುದಿಲ್ಲ. ಪ್ರಾನ್ ತಿಂದು ಟೋಕಿಯೋದ ರಸ್ತೆಗಳಲ್ಲಿ ಉಗುಳುವುದಿಲ್ಲ. ಬೋಸ್ಟನ್‌ನಲ್ಲಿ ನಕಲಿ ಸರ್ಟಿಫಿಕೇಟು ತೋರಿಸಿ ಜಾಗ ಗಿಟ್ಟಿಸುವುದಿಲ್ಲ. ನಾನು ನಿಮ್ಮ ಬಗ್ಗೆಯೇ ಹೇಳುತ್ತಿದ್ದೇನೆ. ನೀವು ಪರದೇಶಗಳಿಗೆ ಹೋಗಿ ಅಲ್ಲಿನ ಕಾನೂನುಗಳನ್ನು ಗೌರವಿಸುತ್ತೀರಿ. ನಿಮ್ಮ ದೇಶದಲ್ಲೆ ಯಾಕೆ ಸಾಧ್ಯವಿಲ್ಲ? ಮರಳಿ ಭಾರತಕ್ಕೆ ಬಂದ ತತ್‌ಕ್ಷಣ ರಸ್ತೆಗಳಲ್ಲಿ ಕಸಕಡ್ಡಿ ಎಸೆಯುತ್ತೀರಿ. ಪರದೇಶದಲ್ಲಿ ಮಾದರಿ ನಾಗರಿಕನಾಗುವ ನೀವು ಭಾರತದಲ್ಲಿ ಯಾಕಾಗುವುದಿಲ್ಲ?"

ಇಂತಹ ನೈತಿಕ ಅಧಃಪತನದ ಸಂದಿಗ್ಧ ಪರಿಸ್ಥಿತಿಯಲ್ಲಿ ನಮಗೆ ಮಹಾತ್ಮಗಾಂಧೀಜಿಯವರ ಜೀವನ ಪ್ರೇರಣೆ ಕೊಡುತ್ತದೆ. ಗಾಂಧೀಜಿ ಹೇಳುತ್ತಿದ್ದರು. 'ನನ್ನ ಜೀವನವೇ ನನ್ನ ಸಂದೇಶ' ಎಂಬುದಾಗಿ ಅವರಿಗೆ ಗುರಿಯಷ್ಟೇ ದಾರಿಯೂ ಮುಖ್ಯವಾಗಿತ್ತು. ಅವರು ತಮ್ಮ ಪರಿಶುದ್ಧ ಚಾರಿತ್ರ್ಯವನ್ನು ಉಳಿಸಿಕೊಂಡೆ ಸ್ವಾತಂತ್ರ್ಯ ಹೋರಾಟವನ್ನು ಮಾಡಿದರು. ಸತ್ಯ, ಅಹಿಂಸೆ, ಪ್ರಾಮಾಣಿಕತೆ, ಪರೋಪಕಾರ, ಪ್ರೀತಿ, ಮಮತೆ, ಕರುಣೆ, ಸಹನೆ, ಸೇವೆ, ಶುಚಿತ್ವ ಮುಂತಾದ ಮಾನವೀಯ ಮೌಲ್ಯಗಳು ಅವರ ಬದುಕಿನಲ್ಲಿ ಉಸಿರಿನಷ್ಟೆ ಸಹಜವಾಗಿ ಹಾಸಿಹೊಕ್ಕಾಗಿತ್ತು. ಆದ್ದರಿಂದಲೆ 'ನಮ್ಮದು ಸೂರ್ಯ ಮುಳುಗದ ಸಾಮ್ರಾಜ್ಯ ' ಎಂದು ಹೇಳಕೊಂಡ ಬ್ರಿಟಿಷರು ಅರೆ ಬಟ್ಟೆಯ ಫಕೀರನಿಗೆ ಶರಣಾಗಬೇಕಾಯಿತು.

ಗಾಂಧೀಜಿಯವರು ನಮ್ಮ ಸನಾತನ ಧರ್ಮದ ಪ್ರತಿನಿಧಿಯಾಗಿದ್ದರು. ಅವರು ಈ ನೆಲದ ಧರ್ಮ, ಸಂಸ್ಕೃತಿಯ ಪ್ರತೀಕವಾಗಿದ್ದರು ಇಂತಹ ಮಹಾಪುರುಷರ ಜೀವನ ಮೌಲ್ಯಗಳನ್ನು ನಮ್ಮಲ್ಲೂ ಅಳವಡಿಸಿಕೊಂಡರೆ ಈ ದೇಶವನ್ನು ಕಿತ್ತು ತಿನ್ನುವ ಬಹುತೇಕ ಸಮಸ್ಯೆಗಳು ನಿವಾರಣೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಪ್ರೀತಿಯ ಸದಾನಂದ ಮೇಷ್ಟ್ರು

–ಸುಮಾನಸ್ ಕೌಲಗಿ

(ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಪಾರಂಪರಿಕ ಸಸ್ಯ ಸಂಪತ್ತು, ವನ್ಯಜೀವಿ, ಫೋಟೋಗ್ರಫಿ, ಕನ್ನಡ ಅಧ್ಯಯನ ಸಂಸ್ಥೆಯ ವಿಶ್ವಕೋಶ, ವಿಜ್ಞಾನ ವಿಭಾಗದ ಸದಸ್ಯರಾಗಿ ಕೆಲಸ ಮಾಡಿದ ಮತ್ತು ಅಪಾರ ಸ್ನೇಹಿತರ ಹಾಗೂ ಶಿಷ್ಯರ ಬಳಗವನ್ನು ಹೊಂದಿದ್ದ ಕೆ.ಬಿ. ಸದಾನಂದ ರವರು ೨೦೧೬ ಅಕ್ಟೋಬರ್ ೧ ರಂದು ತೀರಿಕೊಂಡರು. ಜನಪದ ಸೇವಾ ಟ್ರಸ್ಟಿನ ನಿಕಟ ಒಡನಾಡಿಯಾಗಿದ್ದ ಕೆ. ಬಿ. ಸದಾನಂದ ಅವರಿಗೆ ಶ್ರದ್ಧಾಂಜಲಿ ರೂಪದಲ್ಲಿ ಓರ್ವ ಯುವ ಅಭಿಮಾನಿಯ ಈ ಲೇಖನ)

ಮರಗಿಡಗಳ ಬಗ್ಗೆ ಯೋಚಿಸಿದೊಡನೆ ನನಗೆ ಥಟ್ಟನೆ ನೆನಪಾಗುವುದು ಸದಾನಂದ ಮೇಷ್ಟ್ರು. ನಾನು ಹುಟ್ಟುವ ಮೊದಲೇ ನನ್ನ ಕುಟುಂಬಕ್ಕೆ.ಅವರು ಪರಿಚಿತರು. ಮೊದಲನೆಯ ಸಲ ನನ್ನನ್ನು ಅವರು ನಮ್ಮೂರು ಮೇಲುಕೋಟೆಯ ಪಕ್ಕದಲ್ಲಿರುವ ಕಾಡಿಗೆ ಕರೆದೊಯ್ದದ್ದು ಇನ್ನೂ ನೆನಪಿದೆ. ಆಗಿನ್ನೂ ನನಗೆ ಹತ್ತು ವರ್ಷ. ಅಂದು ಕಾಡಿನಲ್ಲಿ ನೆಲದ ಮೇಲಿದ್ದ ಒಂದು ಸಣ್ಣ ವೃತ್ತಾಕಾರದ ಕೆಂಪು ಬಣ್ಣದ ಡ್ರಾಸೆರಾ ಎಂಬ ಕೀಟಾಕಾರಿ ಸಸ್ಯವನ್ನು ಅವರು ತೋರಿಸಿದ್ದರು. ಇರುವೆಯು ಆ ಸಸ್ಯದ ಅಂಟಿಗೆ ಸಿಕ್ಕಿ ಹಾಕಿಕೊಂಡು ವಿಲವಿಲ ಒದ್ದಾಡುತ್ತಿರುವಾಗ ಆ ಸಸ್ಯವು ಮುದುಡಿ ಬಕಾಸುರನಂತೆ ಆ ಇರುವೆಯನ್ನು ತಿಂದು ಹಾಕಿದ್ದನ್ನು ಕಂಡು ಕುತೂಹಲವೂ ಆಶ್ಚರ್ಯವೂ ಆಗಿತ್ತು. ಈ ಎಲ್ಲವೂ ನಡೆಯುತ್ತಿರುವಾಗ ಸದಾನಂದ ಮೇಷ್ಟ್ರು ನೀಡುತ್ತಿದ್ದ ವೀಕ್ಷಕ ವಿವರಣೆ ನನ್ನ ಕಿವಿಯಲ್ಲಿ ಇನ್ನೂ ಗುಂಯ್ ಗುಡುತ್ತಿದೆ. ಹಾಗೆಯೆ ಮತ್ತೊಂದು ಸಲ ಸೊಗದೆ ಬೇರು ಎನ್ನುವ ಸಣ್ಣ ಬಳ್ಳಿಯನ್ನು ತೋರಿಸಿ ಅದರ ಬೇರಿನಲ್ಲಿ ರಕ್ತವನ್ನು ಶುದ್ಧಗೊಳಿಸುವ ಔಷಧೀಯ ಗುಣವಿದೆ ಎಂದು ಹೇಳಿ ಅದರ ಪಾನೀಯವನ್ನು ಮಾಡಿ ನಮಗೆಲ್ಲಾ ಕುಡಿಸಿದ್ದು ಮರೆಯುವಂತಿಲ್ಲ. ಆ ಬೇರಿನ ಘಮ್ಮನೆ ವಾಸನೆಯನ್ನು ಮೊದಲ ಸಲ ನಾನು ಆಘ್ರಾಣಿಸಿದ್ದು ಅವತ್ತೇ. ಪ್ರತಿಯೊಂದು ಸಸ್ಯವನ್ನೂ ಅದರ ವೈಶಿಷ್ಟ್ಯದೊಂದಿಗೆ ಕುತೂಹಲಕಾರಿಯಾಗಿ ವರ್ಣಿಸುತ್ತ ಅವುಗಳ ಮೇಲೆ ಪ್ರೀತಿ ಹಾಗೂ ವೈಜ್ಞಾನಿಕ ದೃಷ್ಟಿಕೋನವನ್ನು ಅವರು ನನ್ನಲ್ಲಿ ಬೆಳೆಸಿದರು.

ಹೀಗೆ ಸಸ್ಯಗಳ ಬಗ್ಗೆ ಪ್ರಾರಂಭವಾದ ಹುಚ್ಚು ನನ್ನನ್ನು ಪದೇ ಪದೇ ಕಾಡಿಗೆ ಹೋಗುವಂತೆ ಮಾಡಿತು. ಹಾಗೆ ಹೋಗುವಾಗ ಕೆಲವು ಗುರುತಿಸಲಾಗದ ಗಿಡಗಳು ಕಾಣಸಿಗುತ್ತಿದ್ದವು. ಎಷ್ಟೋ ಬಾರಿ ಕೈಪಿಡಿಗಳನ್ನು ತಿರುವಿದರೂ ಅವುಗಳನ್ನು ಗುರುತಿಸಲು

ಸಾಧ್ಯವಾಗುತ್ತಿರಲಿಲ್ಲ. ಆಗ ಮನಸ್ಸಿನಲ್ಲಿಯೇ ಯಾವುದೋ ಒಂದು ಅಪರೂಪದ ಗಿಡವನ್ನೊ ಅಥವ ಯಾರಿಗೂ ತಿಳಿಯದ ಹೊಸ ಸಸ್ಯವನ್ನೊ ಹುಡುಕಿದ್ದೇನೆ ಎನ್ನುವ ಸಂತೋಷದೊಂದಿಗೆ ಮೇಷ್ಟ್ರ ಬಳಿ ತೆಗೆದುಕೊಂಡು ಹೋಗುತ್ತಿದ್ದೆ. ಆದರೆ ಆ ಸಂತೋಷವು ಬಹಳ ಹೊತ್ತು ಉಳಿಯುತ್ತಿರಲಿಲ್ಲ. ಮೇಷ್ಟ್ರು ಆ ಗಿಡಗಳ ಎಲೆ, ಹೂವುಗಳನ್ನು ನೋಡುತ್ತಿದ್ದಂತೆಯೇ ಇದು ಈ ಗಿಡ, ಈ ಜಾತಿಯದ್ದು ಎಂದು ಥಟ್ಟನೆ ಹೇಳಿಬಿಡುತ್ತಿದ್ದರು. ಸಸ್ಯಗಳ ಮೇಲಿನ ಅವರ ಪಾಂಡಿತ್ಯ ಬೆರಗುಗೊಳಿಸುತ್ತಿತ್ತು.

ಅವರನ್ನು ಕಂಡರೆ ನನಗೆ ಅಪಾರ ಗೌರವ ಮತ್ತು ಪ್ರೀತಿ. ನಾನು ವಯಸ್ಸಿನಲ್ಲಿ ಅವರಿಗಿಂತ ೫೫ ವರ್ಷ ಚಿಕ್ಕವನಾಗಿದ್ದರೂ ಅವರು ಎಂದೂ ನನ್ನೊಡನೆ ಸಿಡುಕಿ, ಹಗುರವಾಗಿ ಮಾತಾನಾಡಿದ್ದೇ ಇಲ್ಲ. ಅವರು ನನ್ನೊಂದಿಗೆ ಸಮಾನ ವಯಸ್ಸಿನ ಗೆಳೆಯನಂತೆ ಬೆರೆತುಹೋಗುತ್ತಿದ್ದರು. ಅವರು ಕೀಟಲೆ ಮಾಡುವುದರಲ್ಲೂ, ಕಿಚಾಯಿಸುವುದರಲ್ಲೂ, ನಿಸ್ಸೀಮರು. ಒಂದು ಸಲ ಮಕ್ಕಳೊಂದಿಗೆ ಕಾಡಿಗೆ ಹೋಗಿದ್ದಾಗ ಹಾಜಮೋಲಾ ಚಕಲೇಟೆಂದು ಹೇಳಿ ಎಲ್ಲಾ ಮಕ್ಕಳಿಗೂ ಮೊಲದ ಹಿಕ್ಕೆಯನ್ನು ತಿನ್ನಿಸಿ ಎಲ್ಲರನ್ನೂ ಬೇಸ್ತು ಬೀಳಿಸಿದ್ದರು. ಮಕ್ಕಳಿಗೆ ಸಸ್ಯಗಳ ಬಗ್ಗೆ ತಿಳಿವಳಿಕೆ ನೀಡುವುದರ ಜೊತೆಗೆ ಮಕ್ಕಳೊಂದಿಗೆ ಸಂತೋಷದಿಂದ ಬೆರೆತುಬಿಡುತ್ತಿದ್ದರು.

ಅವರ ಒಡನಾಟದಿಂದ ನಾನು ನನ್ನ ಪದವಿ ವ್ಯಾಸಾಂಗದಲ್ಲಿ ಸಸ್ಯಶಾಸ್ತ್ರವನ್ನು ಒಂದು ವಿಷಯವಾಗಿ ಆರಿಸಿಕೊಂಡೆ. ಆ ಸಮಯದಲ್ಲಿ ಮುಂಡೀಚಲು ಎನ್ನುವ ಅಪರೂಪದ ಸಸ್ಯದ ಮೇಲೆ ಅಧ್ಯಯನ ಮಾಡಲು ತೊಡಗಿದೆ. ಆಗ ಮೇಷ್ಟ್ರು ನನಗೆ ಸಸ್ಯಗಳನ್ನು ಅಧ್ಯಯನ ಮಾಡುವ ರೀತಿ ಹಾಗೂ ಆ ಗಿಡಗಳ ಬಗ್ಗೆ ಇದ್ದ ಅವರ ಪಾಂಡಿತ್ಯವನ್ನು ನನ್ನೊಡನೆ ಹಂಚಿಕೊಂಡಿದ್ದರು. ಅವರ ಆ ಮಾರ್ಗದರ್ಶನದಿಂದಾಗಿ ನನ್ನ ಮೊದಲ ಅಧ್ಯಯನ ಪ್ರಬಂಧವು ಅಂತಾರಾಷ್ಟ್ರೀಯ ಪತ್ರಿಕೆಯಲ್ಲಿ ಪ್ರಕಟಗೊಂಡಿತು. ಆ ಸಮಯದಲ್ಲಿ ಅವರು ತಮ್ಮ ಕೈಯಾರೆ ಮಾಡಿದ್ದ 'ಹರ್ಬೇರಿಯಾ'ಗಳನ್ನು ತೋರಿಸಿದ್ದರು. ಅಪರೂಪದ ಗಿಡಗಳ ಎಲೆ, ಹೂವು, ಕಾಯಿಗಳನ್ನು ಬಣ್ಣ ಹೋಗದಂತೆ ಒಣಗಿಸಿ, ಅವುಗಳನ್ನು ದಪ್ಪ ಹಾಳೆಗಳಿಗೆ ಅಂಟಿಸಿ ಅದನ್ನು ಆರಿಸಿಕೊಂಡ ಸ್ಥಳ, ದಿನಾಂಕ ಎಲ್ಲವನ್ನೂ ಅಚ್ಚುಕಟ್ಟಾಗಿ ಬರೆದಿದ್ದರು. ಅಂದು ಅದನ್ನು ನೋಡಿ ನನಗೆ ಅವರ ಕೆಲಸದ ಮೇಲಿನ ಶ್ರದ್ಧೆ ಅರಿವಿಗೆ ಬಂತು.

ನಾನು ಗಿಡಗಳ ಮೇಲೆ ಅಲ್ಪ ಸ್ವಲ್ಪ ತಿಳಿದುಕೊಂಡಿದ್ದು, ಪ್ರಪಂಚದ ಅತ್ಯುತ್ತಮ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಆಕ್ಸ್‌ಫರ್ಡ್‌ನಲ್ಲಿ ಜೀವ ವೈವಿಧ್ಯತೆ ಮೇಲೆ ಸ್ನಾತಕೊತ್ತರ ಪದವಿಯನ್ನು ಪಡೆದಿದ್ದರೆ ಅದಕ್ಕೆ ಕಾರಣ ಸದಾನಂದ ಮೇಷ್ಟ್ರ ಒಡನಾಟ ಎಂದರೆ ತಪ್ಪಾಗಲಾರದು.ಅವರು ನಮ್ಮಲ್ಲೆಲ್ಲಾ ಬಿತ್ತಿದ 'ಸಸ್ಯಗಳ ಜ್ಞಾನದ' ಮೂಲಕ ನಮ್ಮೊಂದಿಗೆ ಸದಾಕಾಲ ಇರುತ್ತಾರೆಂದು ಭಾವಿಸುತ್ತಾರೆ.

ಕರ್ನಾಟಕ ಸರ್ವೋದಯ ಮಂಡಲ ನಡೆದು ಬಂದ ದಾರಿ

-ಸುರೇಂದ್ರ ಕೌಲಗಿ

ಯಾವುದೇ ಒಂದು ಸಾರ್ವಜನಿಕ ಸಂಸ್ಥೆ ಉದ್ಭವವಾಗಬೇಕಾದರೆ ಯಾವುದಾದರೂ ಓರ್ವ ಹಿರಿಯ ಸಾರ್ವಜನಿಕ ಸೇವಕನ ವಿಚಾರದ ಪ್ರೇರಣೆ ಇರುತ್ತದೆ. ಬ್ರಹ್ಮಸಮಾಜ, ಆರ್ಯಸಮಾಜ, ಅರಬಿಂದೋ ಸೊಸೈಟಿ. ಜೆ.ಕೆ.ಕೃಷ್ಣಮೂರ್ತಿ ಫೌಂಡೇಶನ್, ಶಾಂತಿ ನಿಕೇತನ ಮುಂತಾದವುಗಳನ್ನು ಉದಾಹರಿಸಬಹುದು. ಇವು ಗಾಂಧೀಯುಗ ಪೂರ್ವದ ಸಂಸ್ಥೆಗಳಾಗಿದ್ದರೆ ಚರಖ ಸಂಘ, ಗೋ ಸೇವಾ ಸಂಘ, ಜೀವನ ಶಿಕ್ಷಣ ಸಮಿತಿ, ಹರಿಜನ ಸಂಘ, ಮುಂತಾವುಗಳು ಗಾಂಧೀಯುಗದಲ್ಲಿ ಹುಟ್ಟಿದ ಸಂಸ್ಥೆಗಳು.

ಮಹಾತ್ಮ ಗಾಂಧೀಜಿಯವರ ಶಿಷ್ಯರಾದ ಆಚಾರ್ಯ ಸಂತ ವಿನೋಬಾ ಭಾವೆಯವರು ಆರಂಭಿಸಿದ ಭೂದಾನ ಮತ್ತು ಸರ್ವೋದಯ ಆಂದೋಲನ ಯುಗದಲ್ಲಿ ಪ್ರಾರಂಭವಾದುದು ಅಖಿಲ ಭಾರತ ಸರ್ವಸೇವಾಸಂಘ. ಸರ್ವಸೇವಾಸಂಘದ ಅಂಗಸಂಸ್ಥೆಗಳಾಗಿ ಭಾರತದ ಎಲ್ಲ ರಾಜ್ಯಗಳಿಗೂ ಹರಡಿದವು ಸರ್ವೋದಯ ಮಂಡಲಗಳು .

ಆಚಾರ್ಯ ವಿನೋಬಾ ಬಾವೆಯವರ ಆಶೀರ್ವಾದದೊಂದಿಗೆ ಕರ್ನಾಟಕ ರಾಜ್ಯ ಸರ್ವೋದಯು ಮಂಡಲಿ ೧೯೫೮ ಜನವರಿ ೨೮ ರಂದು ಸ್ಥಾಪಿತವಾಯಿತು. ಅದರ ಉದ್ದೇಶ ಮಹತ್ಮಾ ಗಾಂಧೀಜಿಯುವರು ಪ್ರತಿಪಾದಿಸಿರುವ ಎಲ್ಲ ರಚನಾತ್ಮಕ ಕಾರ್ಯಗಳನ್ನು ಉತ್ತೇಜಿಸುವುದು. ಅದಲ್ಲದೆ ವಿನೋಬಾ ಭಾವೆಯವರ ಭೂದಾನ, ಗ್ರಾಮದಾನ, ಶಾಂತಿಸೇನೆ, ಸಂಪತ್ತಿದಾನ, ಸರ್ವೋದಯ ಪಾತ್ರದಂಥ ಕಾರ್ಯಕ್ರಮಗಳನ್ನು ಮುನ್ನಡೆಸಿಕೊಂಡು ಹೋಗುವುದು.

ಕರ್ನಾಟಕ ಸರ್ವೋದಯ ಮಂಡಳಿಯ ಮೊಟ್ಟ ಮೊದಲನೆಯ ಅಧ್ಯಕ್ಷ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಎಣ್ಣೆಹೊಳೆಗ್ರಾಮದ ಮಲ್ಲಿಕಾರ್ಜುನಪ್ಪ ಗೌಡರ್. ದೊಡ್ಡ ಭೂಮಾಲೀಕರಾಗಿದ್ದ ಮಲ್ಲಿಕಾರ್ಜುನಪ್ಪರವರು ತಮ್ಮ ಭೂಮಿಯನ್ನು ಭೂದಾನ ಆಂದೋಲನಕ್ಕೆ ಸಮರ್ಪಣೆ ಮಾಡಿ ನಂತರ ಕಾಲ್ನಡಿಗೆಯ ಮೂಲಕ ಕರ್ನಾಟಕ ರಾಜ್ಯಾದ್ಯಂತ ಪಾದಯಾತ್ರೆ ಮಾಡುತ್ತಾ ಭೂದಾನ ಮತ್ತು ಸರ್ವೋದಯ ವಿಚಾರವನ್ನು ಹರಡಿದ ಮಹನೀಯರು.

ಯಾವುದೇ ಸಾರ್ವಜನಿಕ ಸ್ಥಾನವನ್ನು ಬಯಸದೇ ತಮ್ಮ ಆದರ್ಶಕ್ಕಾಗಿ ದುಡಿದವರು.

ಕರ್ನಾಟಕ ಸರ್ವೋದಯ ಮಂಡಲದ ಎರಡನೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರು ಬೆಳಗುಂಬದ ನಾರಾಣಯಪ್ಪನವರು, ಆಯ್ಕೆಯಿಂದ ಮತ್ತು ವೃತ್ತಿಯಿಂದ ಇಂಜಿನಿಯರ್ ಆದವರು. ಸರ್ಕಾರದ ಕೆಲಸದಲ್ಲಿದ್ದವರು. ಉತ್ತಮ ಸ್ಥಾನ ಮತ್ತು ವೇತನದ ಕೆಲಸಕ್ಕೆ ರಾಜೀನಾಮೆ ಕೊಟ್ಟು ಭೂದಾನ ಆಂದೊಲನಕ್ಕೆ ಬಂದವರು ಮುಂದೆ ಎಂದೂ ಅವರು ಹಿಂದಕ್ಕೆ ನೋಡಲಿಲ್ಲ. ಸರ್ವೋದಯ ಆಂದೋಲನ ಕೆಲಸಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡವರು. ತಮ್ಮ ಸ್ವಗ್ರಾಮ ಬೆಳಗುಂಬದಲ್ಲಿ ಕೂಡಕ್ಕಲು ಸಂಘವನ್ನು ಪ್ರಾರಂಭಿಸಿದವರು.

ರಾಜ್ಯ ಸರ್ವೋದಯ ಮಂಡಳಿಯ ಮೂರನೇ ಅಧ್ಯಕ್ಷರಾಗಿದ್ದವರು ಶ್ರೀ ನೀಲಕಂಠಗಣಾಚಾರಿ ತಮ್ಮನ್ನು ಪೂರ್ಣವಾಗಿ ಸರ್ವೋದಯ ಕೆಲಸಕ್ಕೆ ತೊಡಗಿಸಿಕೊಂಡವರು. ತಾವೇ ಸ್ವತಃ ತಕಲಿಯಿಂದ ದಾರವನ್ನು ತೆಗೆದು ಆ ದಾರದಿಂದಲೇ ಬಟ್ಟೆ ತಯಾರಿಸಿಕೊಂಡ ಸ್ವಾವಲಂಬಿ ಖಾದಿದಾರಿಯಾಗಿದ್ದವರು. ತಯಾರಿಸಿಕೊಂಡ ಬಟ್ಟೆಯನ್ನು ಹೊಲಿಸಿಕೊಳ್ಳದೆ ಸ್ವಾಭಾವಿಕವಾಗಿಯೇ ಅದನ್ನು ತೊಡುತ್ತಿದ್ದರು. ಬಟ್ಟೆ ಒಗೆಯಲು ಸೋಪನ್ನು ಬಳಸುತ್ತಿರಲಿಲ್ಲ.

ಉತ್ತರ ಕರ್ನಾಟಕದಲ್ಲಿ ಅವರಿಗೆ ಅವರ ಬಗ್ಗೆ ಪೂಜ್ಯಭಾವನೆ ಇತ್ತು. ಅವರನ್ನು ಓರ್ವ ಸ್ವಾಮೀಜಿಯು ರೂಪದಲ್ಲಿಯೇ ಕಾಣುತ್ತಿದ್ದರು. ಗಣಾಚಾರಿಯವರು ಗ್ರಾಮಗಳಿಗೆ ನಡೆದುಕೊಂಡೆ ಹೋಗುತ್ತಿದ್ದರು. ತಲೆಯ ಮೇಲೆ ತಮ್ಮ ಬಟ್ಟೆಯ ಗಂಟನ್ನು ಇರಿಸಿಕೊಂಡು ಹೆಗಲಚೀಲದಲ್ಲಿ ಸರ್ವೋದಯ ಸಾಹಿತ್ಯವನ್ನಿರಿಸಿಕೊಂಡು ಪ್ರಯಾಣ ಬೆಳೆಸುತ್ತಿದ್ದರು. ಬಿಡುವು ಸಿಕ್ಕಾಗಲೆಲ್ಲಾ ತಕಲಿಯ ಮೇಲೆ ದಾರ ತೆಗೆಯುತ್ತಿದ್ದರು. ಸುತ್ತಲಿನವರೆಲ್ಲರೂ ಅದನ್ನು ಕೂತುಹಲದಿಂದ ನೋಡುತ್ತಿದ್ದರು ಮತ್ತು ಅದರ ವಿಷಯವಾಗಿ ಪ್ರಶ್ನೆಗಳನ್ನು ಕೇಳುತ್ತಿದ್ದರು ಅದನ್ನೆ ನೆಪ ಮಾಡಿಕೊಂಡು ಶ್ರೀ ನೀಲಕಂಠ ಗಣಚಾರಿಯವರು ನೆರೆದಂತವರಿಗೆ ಗಾಂಧೀಜಿಯವರ ವಿಚಾರ, ಖಾದಿವಿಚಾರ, ವಿನೋಬಾಜಿಯವರ ವಿಚಾರ ಮತ್ತು ಸರ್ವೋದಯದ ವಿಚಾರ ಹೇಳುತ್ತಿದ್ದರು. ನಂತರ ತಮ್ಮ ಬಳಿ ಇದ್ದ ಸರ್ವೋದಯ ಸಾಹಿತ್ಯವನ್ನು ಅವರು ಖರೀದಿಸುವಂತೆ ಪ್ರೇರಣೆ ಕೊಡುತ್ತಿದ್ದರು. ಇದೆಲ್ಲಕ್ಕಿಂತ ಮುಖ್ಯವಾಗಿ ಅವರು ಮದ್ಯಪಾನ ಮುಕ್ತತೆ ಮತ್ತು ಬೀಡಿ-ಸಿಗರೇಟ್ ಮುಂತಾದವುಗಳಿಂದ ಮುಕ್ತತೆಯ ಅಗತ್ಯತೆಯ ಬಗ್ಗೆ ಹೇಳುತ್ತಿದ್ದರು. ಕೊನೆವರೆಗೂ ಜಂಗಮರಾಗಿದ್ದರು.

ಸರ್ವೋದಯ ಮಂಡಳಿಯ ನಾಲ್ಕನೇ ಅಧ್ಯಕ್ಷರಾಗಿ ಬೆಳಗಾವಿ ಜಿಲ್ಲೆಯ

ಕಡೋಲಿ ಗ್ರಾಮದ ಸದಾಶಿವಭೋಸ್ಲೆರವರು. ಉತ್ತರ ಕರ್ನಾಟಕದಿಂದ ಸರ್ವೋದಯ ಮಂಡಲಕ್ಕೆ ಅಧ್ಯಕ್ಷರಾದ ಮೊದಲಿಗರು. (ಈ ಬಗ್ಗೆ ಅನುಮಾನವಿದೆ) ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದಂಥವರು. ಕಡೋಲಿ ಗ್ರಾಮವನ್ನು ಆದರ್ಶ ಗ್ರಾಮವನ್ನಾಗಿ ಮಾಡಲು ಹೆಣಗಿದವರು. ತುಂಬಾ ಸರಳ ಜೀವನ ನಡೆಸಿ ಎಲ್ಲರ ಪ್ರೀತಿಗೆ ಪಾತ್ರರಾಗಿದಂತವರು. ಈಗಲೂ ತಮ್ಮ ಹಿರಿವಯಸ್ಸಿನಲ್ಲಿ ಉತ್ಸಾಹದಿಂದಿರುವಂತಫವರು. ಆಚಾರ್ಯ ವಿನೋಬಾ ಭಾವೆಯವರ ವಿಚಾರದಿಂದ ಪ್ರಾಭಾವಿತವಾದಂತವರು. ಶ್ರೀರಂಗಪಟ್ಟಣ ಪಶ್ಚಿಮವಾಹಿನಿಯಲ್ಲಿ ಪ್ರತಿವರ್ಷ ನಡೆಯುವ ಸರ್ವೋದಯ ಮೇಳದ ಆಚಾರ್ಯರಾಗಿದ್ದವರು.

ಸರ್ವೋದಯ ಮಂಡಳಿಯ ಐದನೇಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರು ಸತ್ಯವ್ರತರು. ಅವರ ಹೆಸರೇ ಸೂಚಿಸುವಂತೆ ತಮ್ಮ ಕಾರ್ಯನಿರ್ವಹಣೆಯ ಉದ್ದಕ್ಕೂ ಸತ್ಯವ್ರತವನ್ನೇ ಪಾಲಿಸಿದವರು. ಗಾಂಧೀ ಸಾಹಿತ್ಯ ಮತ್ತು ವಿನೋಬಾ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದಂತವರು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕಾರಾಗೃಹವಾಸವನ್ನು ಅನುಭವಿಸಿದಂತವರು. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ಪಾದಯಾತ್ರೆ ಮಾಡಿದವರು. ಅನೇಕ ಯುವ ಶಿಬಿರಗಳನ್ನು ನಡೆಸಿದವರು. ಸರ್ವಸೇವಾ ಸಂಘದ ಕಛೇರಿ ಕಾರ್ಯದರ್ಶಿಯಾಗಿಯೂ ಕೆಲಕಾಲ ಕೆಲಸ ಮಾಡಿದಂತವರು. ಕರ್ನಾಟಕ ಸರ್ವೋದಯ ಮಂಡಳಿಯ ಮುಖಪತ್ರಿಕೆಯಾಗಿದ್ದ ಭೂದಾನ ಮತ್ತು ಸರ್ವೋದಯ ವಾಹಿನಿ ಎಂಬ ಪಾಕ್ಷಿಕ ಪತ್ರಿಕೆಗಳ ಸಂಪಾದಕರಾಗಿ ಕೆಲಸ ಮಾಡಿದವರು. ಆ ಪತ್ರಿಕೆಗಳ ಮೂಲಕ ಅಧ್ಯಯನಪೂರ್ಣ ಲೇಖನಗಳನ್ನು ಬರೆದವರು. ಆ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸಿದಲ್ಲಿ ಹಲವಾರು ಸಂಪುಟಗಳೆ ಆಗಬಹುದು. ದೂರದರ್ಶನದಲ್ಲಿ ಸರಣಿ ಸಂದರ್ಶನ ನೀಡಿದವರು. ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಅಂಕಣ ಬರೆದವರು. ಸರ್ವೋದಯ ಸಾಹಿತ್ಯ ಸಮಿತಿಯ ಕಾರ್ಯವನ್ನು ನಿರ್ವಹಿಸಿದವರು. ಪಶ್ಚಿಮಾವಾಹಿನಿಯಲ್ಲಿ ನಡೆಯುವ ಸರ್ವೋದಯ ಮೇಳದಲ್ಲಿ ತಪ್ಪದೇ ಭಾಗವಹಿಸುತ್ತಿದ್ದರು. ಅವರೊಂದಿಗೆ ಸಹಕರಿಸಿದವರು ಕೆ. ಸೀತಾರಾಮ ಅಯ್ಯಂಗಾರ್‌ರವರು ಸಾಹಿತ್ಯ ಸಮಿತಿಯ ಮೂಲಕ ಅನೇಕ ಸರ್ವೋದಯ ವಿಚಾರದ ಪುಸ್ತಕಗಳನ್ನು ಪ್ರಕಟಿಸಿದವರು. ಅವರಿಗೆ ಹಣ ಸಂಪಾದನೆಯ ಯಾವುದೇ ಸ್ವಂತ ಮೂಲವಿರಲಿಲ್ಲ. ಅವರು ಲಕ್ಷ್ಮೀಯವರ ಸಂಪಾದನೆಯ ಮೇಲೆ ಜೀವನ ನಡೆಸುತ್ತಿದ್ದರು. ಮಾನವ ಮಂಟಪ

ಎಂಬ ಪ್ರಗತಿಪರ ಸಂಸ್ಥೆಯ ಸ್ಥಾಪಕರಾಗಿ ಮತ್ತು ಸಂಚಾಲಕರಾಗಿ ಕೆಲಸ ಮಾಡಿದವರು. ರಾಜ್ಯದ ಪ್ರಮುಖ ಖಾದಿ ಸಂಸ್ಥೆಯಾದ ಕರ್ನಾಟಕ ಸರ್ವೋದಯ ಸಂಘದ ಖಜಾಂಚಿಯಾಗಿಯೂ ಸೇವೆ ಸಲ್ಲಿಸಿದವರು.

ಸರ್ವೋದಯ ಮಂಡಳಿಯ ಆರನೇ ಅಧ್ಯಕ್ಷರಾಗಿ ಕೆಲಸಮಾಡಿದವರು ಡಾ॥ ಎಚ್. ಎಸ್. ದೊರೆಸ್ವಾಮಿಯವರು. ಸ್ವಾತಂತ್ರ್ಯ ಚಳುವಳಿಯ ಸಂಧರ್ಭದಲ್ಲಿ ಕಾರಾಗೃಹವಾಸ ಅನುಭವಿಸಿದವರು. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿಯೂ ಕಾರಾಗೃಹವಾಸ ಅನುಭವಿಸಿದವರು. ಹೋರಾಟದ ಸ್ವಾಭಾವವನ್ನು ಮೈಗೂಡಿಸಿಕೊಂಡವರು.

ಕರ್ನಾಟಕ ಸರ್ವೋದಯ ಮಂಡಳಿಯ ಅರವತ್ತು ವರ್ಷಗಳ ಧೀರ್ಘ ಇತಿಹಾಸದಲ್ಲಿ ಕೆಲ ಏರಿಳಿತಗಳಾಗಿವೆ. ಭಿನ್ನಾಭಿಪ್ರಾಯ ವೈಮನಸ್ಸು ಮುಂತಾದ ಮಾನವಸಹಜ ದೌರ್ಬಲ್ಯಗಳ ಆಘಾತಕ್ಕೂ ತುತ್ತಾಗಿದೆ. ಈ ಅವಧಿಯ ದಾಖಲೆಗಳೆಲ್ಲವನ್ನೂ ಹುಡುಕಿ ಸಂಗ್ರಹಿಸಿ ಅಧ್ಯಯನ ಮಾಡಿದಲ್ಲಿ ಕರ್ನಾಟಕ ರಾಜ್ಯದಲ್ಲಿ ಸರ್ವೋದಯ ಆಂದೋಲನ ಚರಿತ್ರೆಯನ್ನು ನಿಖರವಾಗಿ ಬರೆಯಬಹುದು. ಸದ್ಯಕ್ಕೆ ಸತ್ಯವ್ರತ, ಸುರೇಂದ್ರ ಕೌಲಗಿ ಮತ್ತು ದೊರೆಸ್ವಾಮಿಯವರ ಬಗ್ಗೆ ಪುಸ್ತಕಗಳು ದೊರೆಯುತ್ತವೆ.

ಸರ್ವೋದಯ ಮಂಡಳಿಯ ಮುಖಪತ್ರಿಕೆಯಾಗಿದ್ದ ಸರ್ವೋದಯ ವಾಹಿನಿ ಸತ್ಯವ್ರತರು ನಿಧನಾ ನಂತರ ನಿಲುಗಡೆ ಬಂದಿತು. ಕೆಲ ಸಮಯ ಪತ್ರಿಕೆ ಸಂಪಾದಕರಾಗಿ ತುಮಕೂರಿನ ಎಂ. ಬಸವಂಯ್ಯನವರು ಸಂಪಾದಕರಾಗಿದ್ದರು. ಈಗ "ಜನಪದ ವಿಚಾರ" ಎಂಬ ಮಾಸಪತ್ರಿಕೆ ಸರ್ವೋದಯ ಆಂದೋಲನದ ವಿಚಾರಗಳನ್ನು ಮುನ್ನಡೆಸಿಕೊಂಡು ಬರುತ್ತಿದೆ.

ಅರವತ್ತನೇ ವರ್ಷದಲ್ಲಿ ಕಾಲಿಡುತ್ತಿರುವ ಕರ್ನಾಟಕ ಸರ್ವೋದಯ ಮಂಡಲವು ಸದ್ಯ ನಿಶ್ಕ್ರೀಯಾವಸ್ಥೆಯಲ್ಲಿದೆ. ಆದರೂ ಕ್ರಿಯಾಶಕ್ತಿಯನ್ನು ಪಡೆಯಲು ಹವಣಿಸುತ್ತಿದೆ. ಅದಕ್ಕಾಗಿ ರಾಜ್ಯದಲ್ಲಿರುವ ಎಲ್ಲ ಸರ್ವೋದಯ ವಿಚಾರಪ್ರೇಮಿಗಳ ಸಹಕಾರ ಬೇಕಿದೆ. ದೇಶ ಮತ್ತು ರಾಜ್ಯದ ವರ್ತಮಾನ ಪರಿಸ್ಥಿತಿಯಲ್ಲಿ ಸರ್ವೋದಯ ಸಮಾಜ ರಚನೆಯ ಅಗತ್ಯತೆ ತುಂಬ ಇದೆ. ಅದಕ್ಕಾಗಿ ಸರ್ವೋದಯ ಮಂಡಲ ಸಿದ್ಧಗೊಳ್ಳಬೇಕಿದೆ. ರಿಜಿಸ್ಟರ್ ಸಂಸ್ಥೆಯಾದ ಸರ್ವೋದಯ ಮಂಡಲ ಪುನಃ ಕಾನೂನು ಬದ್ದವಾಗಿ ನಿಂತುಕೊಳ್ಳಬೇಕಿದೆ. ಸರ್ವಸೇವಾ ಸಂಘದ ಅಧಿಕೃತ ಮಾನ್ಯತೆಯನ್ನು ಪಡೆಯಬೇಕಿದೆ. ಈ ಎಲ್ಲ ಕೆಲಸಗಳನ್ನು ಮುಂದಿನ ಪೀಳಿಗೆ ಮಾಡುತ್ತದೆಂದು ಆಶಿಸಲಾಗಿದೆ.

ಖಾದಿ ವಿಚಾರ

ಸ್ವಾವಲಂಬಿ ಖಾದಿ ಉತ್ಪಾದನೆಯತ್ತ ದಿಟ್ಟ ಹೆಜ್ಜೆ

ಖಾದಿ ಬಟ್ಟೆ ಉತ್ಪಾದನೆಗೆ ಮುಖ್ಯವಾಗಿ ಬೇಕಾಗುವ ನೂಲನ್ನು ತಯಾರಿಸುವ ಅನೇಕ ವಿಧವಾದ ಚರಖಗಳಿವೆ. ಗರಿಚರಖ, ಕಿಸಾನ್ ಚರಖ, ಪೀಟಿಲ್ ಚರಖ, ಪೆಟ್ಟಿಗೆ ಚರಖ , ಬುಕ್ ಚರಖ ಮತ್ತು ಅಂಬರ್ ಚರಖ ಇತ್ಯಾದಿ ಗಾಂಧೀಜೀಯವರು ಗರಿಚರಖದ ಮೇಲೂ ಮತ್ತು ಪೆಟ್ಟಿಗೆ ಚರಖದ ಮೇಲೂ ನೂಲು ತೆಗೆಯುತ್ತಿದ್ದರು. ಪೆಟ್ಟಿಗೆ ಚರಕದ ಮೇಲೂ ನೂಲು ತೆಗೆಯುತ್ತಿದ್ದರು. ಪೆಟ್ಟಿಗೆ ಚರಖವನ್ನು ಇಷ್ಟಬಂದ ಕಡೆಗೆ ತೆಗೆದುಕೊಂಡು ಹೋಗಬಹುದಾಗಿರುವಂತಹದು! ನೂಲೂ ತೆಗೆದಾದ ನಂತರ ಮಡಿಚಿ ಇಂಡುವಂತಾಹದು ಈ ಅನೂಕೂಲತೆಗಳ ಕಾರಣದಿಂದ ಪೆಟ್ಟಿಗೆ ಚರಕ ಖಾದಿ ಪ್ರಿಯರಲ್ಲಿ ಜನಪ್ರಿಯವಾಗಿದೆ. ಅಂಬರ್ ಚರಖದ ಆವಿಷ್ಕಾರದ ನಂತರ ಪೆಟ್ಟಿಗೆ ಚರಖದ ಮೇಲೆ ನೂಲುವವರ ಸಂಖ್ಯೆ ಕಡಿಮೆಯಾಗುತ್ತಾ ಬಂದಿತ್ತು. ಕೆಲವೇ ಕೆಲವು ಜನ ಹಿರಿಯ ಗಾಂಧೀ ವಿಚಾರದವರು ಮತ್ತು ಸ್ವಾತಂತ್ರ ಹೋರಾಟಗಾರರೂ ಪೆಟ್ಟಿಗೆ ಚರಖದ ಮೇಲೆ ಈಗಲೂ ನೂಲುತ್ತಿದ್ದಾರೆ. ಅವರು ಗತಿಸಿದ ನಂತರ ಪೆಟ್ಟಿಗೆ ಚರಖದ ಮೇಲೆ ನೂಲುವವರು ಇಲ್ಲದಂತಾಗುತ್ತದೆ. ಅದರೊಂದಿಗೆ ಗಾಂಧೀಜಿ ಕಾಲದಿಂದ ಬಂದಿರುವಂತ ನೂಲುಗಾರಿಕೆಯ ಕಲೆಯು ಮಾಯಾವಾಗುತ್ತದೆ. ಆದರೆ ಇಂದಿನ ದಾವಂತ ಜೀವನದಲ್ಲಿ ಮತ್ತು ಆಧುನಿಕ ಶೈಲಿಯ ಜೀವನ ಪದ್ಧತಿಯಲ್ಲಿಯೂ ಕೂಡ ಕೆಲವರು ಶಾಂತಿ ಮತ್ತು ನೆಮ್ಮದಿಗಾಗಿ ಹಾಗೂ ಸರಳ ಜೀವನ ಶೈಲಿಯನ್ನು ನಡೆಸುವುದಕ್ಕಾಗಿ ಪೆಟ್ಟಿಗೆ ಚರಕದ ಮೇಲೆ ನೂಲುವುದಕ್ಕೆ ಇಷ್ಟಪಡುವವರಿದ್ದಾರೆ. ಅಲ್ಲಲ್ಲಿ ಹೊಸ ತಲೆಮಾರಿನ ಯುವಕರು, ಸಾಪ್ಟವೇರ್ ಇಂಜಿನಿಯರ್‌ಗಳು ಈ ವಿಷಯದಲ್ಲಿ ಆಸಕ್ತಿ ತೋರುಸುತ್ತಿದ್ದಾರೆ. ಇದನ್ನು ಅರಿತ ಮಾಧವ್ ಸಹಸ್ರಬುಧ್ನೆ ಎಂಬ ನಿವೃತ್ತ ಇಂಜಿನಿಯರ್ ಪೆಟ್ಟಿಗೆ ಚರಖ ಪುನರ್ ಪ್ರಚಾರಕ್ಕೆ ಬರುವಂತೆ ಶ್ರಮಿಸುತ್ತಿರುವ ವ್ಯಕ್ತಿ ತಮ್ಮ ನಿವೃತ್ತಿ ಜೀವನ ಕ್ರಿಯಾಶೀಲಾವಾಗಿರಬೇಕೆಂಬ ಮತ್ತು ಅರ್ಥಪೂರ್ಣವಾಗಿರಬೇಕೆಂಬ ಉದ್ದೇಶದಿಂದ ಅವರು ದೇಶಾದಾದ್ಯಂತ ಸುತ್ತಾಡುತ್ತಾ ಆಸಕ್ತರಲ್ಲಿ ನೂಲುಗಾರಿಕೆಯನ್ನು ಕಲಿಸುತ್ತಾರೆ ಮತ್ತು ಅವರು ತಮ್ಮ ಬಟ್ಟೆಯ ವಿಷಯದಲ್ಲಿ ಸ್ವಾವಲಂಭಿಗಳಾಗುವಂತೆ ಮಾಡಲು ಉತ್ತೇಜಿಸುತ್ತಿದ್ದಾರೆ. ಈ ಧ್ಯೇಯೋದ್ದೇಶದಿಂದ ಅವರು ಮತ್ತು ಅವರ ಸಂಗಡಿಗರಾದ ಲಾವಣ್ಯ, ಉಮಾ, ಜಾಹ್ನವಿ ಮತ್ತು ಚಂದ್ರ ಅವರು ಟ್ರಸ್ಟಿಗೆ ಭೇಟಿಕೊಟ್ಟಿದ್ದಾರೆ. ಟ್ರಸ್ಟಿನಲ್ಲಿರುವ ಪೆಟ್ಟಿಗೆ ಚರಕಗಳು ಉಪಯೋಗಕ್ಕೆ ಬರುವಂತೆ ಮಾಡಿದ್ದಾರೆ. ಸಧ್ಯದಲ್ಲಿಯೇ ಹಲವಾರು ಜನರು ಟ್ರಸ್ಟಿಗೆ ಬಂದು ನೂಲುಗಾರಿಕೆಯನ್ನು ಕಲಿಯಲು ಬರುವುವರಿದ್ದಾರೆ ಜನಪದ ಸೇವಾ ಟ್ರಸ್ಟ್ ಹಲವಾರು ವರ್ಷಗಳಿಂದ ತನ್ನನ್ನು ಖಾದಿ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದೆ. ಉತ್ತಮವಾದ ಖಾದಿ ಬಟ್ಟೆಯನ್ನು ಉತ್ಪಾದಿಸುತ್ತಿದೆ. "ಜನಪದ ಖಾದಿ" ಎಂಬ ಹೆಸರಿನಲ್ಲಿ ಜನಪ್ರಿಯವಾಗಿದೆ. ಪೆಟ್ಟಿಗೆ ಚರಖದ ನೂಲುಗಾರಿಕೆಯನ್ನು ಬೆಳಕಿಗೆ ತರುವಲ್ಲಿ ಟ್ರಸ್ಟ್ ಪ್ರಯತ್ನಿಸುತ್ತಿರುವುದಕ್ಕೆ ಸಂತೋಷವೆನಿಸುತ್ತದೆ.

ನಾಲ್ಕು ನಿಟ್ಟಿನಿಂದ

ಕೇವಲ ಕಾಗದದ ಮೇಲೆ [redacted] ಇರುವ ರಾಜಕೀಯ ಪಕ್ಷಗಳ ಸಂಖ್ಯೆ ೨೫೫. ಅವು ಕೊಟ್ಟ ವಿಳಾಸಗಳು ಕೂಡ ಸುಳ್ಳು. ಏಳು ರಾಷ್ಟ್ರೀಯ ಪಕ್ಷಗಳು ಇವೆ ಮತ್ತು ೪೮ ಪ್ರಾದೇಶಿಕ ಪಕ್ಷಗಳು ಇವೆ. ಅಲ್ಲದೆ ನೊಂದಾಯಿತಗೊಳ್ಳದೆ ಇರುವ ಮಾನ್ಯತೆ ಇರದೇ ಇರುವ ೧೮೦೦ ಪಕ್ಷಗಳಿವೆ. ದೇಶದ ಚುನಾವಣಾ ಪದ್ಧತಿಯನ್ನು ಸುಧಾರಿಸುವ ಮತ್ತು ಕಪ್ಪು ಹಣದಿಂದ ಮುಕ್ತಗೊಳಿಸುವ ಕಾಲ ಬಂದಿದೆ.

–ಸುದಾನ್‌ಶೂನ್ ರಂಜನ್

ಸರ್ಕಾರಗಳು ಕೇಂದ್ರ ಮತ್ತು ರಾಜ್ಯ, ಉನ್ನತ ನ್ಯಾಯಾಲಯಗಳು, ಸಂಸತ್ತು ಎಲ್ಲವೂ ಭೋಪಾಲ್ ಗ್ಯಾಸ್ ದುರಂತಕ್ಕೆ ಒಳಗಾದವರನ್ನು ನಿಃಸ್ಸಂದೇಹವಾಗಿ ಕೈಬಿಟ್ಟಿವೆ!

–ಪವನಕುಮಾರ

ಪ್ರತಿವರ್ಷ ತಮಿಳುನಾಡಿನಲ್ಲಿ ನಡೆಯುವ ಜಲ್ಲಿಕಟ್ಟು ಸ್ಪರ್ಧೆಗೆ ಸುಪ್ರಿಂಕೋರ್ಟ್ ಹಾಕಿರುವ ತಡೆಯಾಜ್ಞೆಯನ್ನು ತೆರವುಗೊಳಿಸಬೇಕೆಂದು ತಮಿಳುನಾಡು ಸರ್ಕಾರವು ಮಾಡುತ್ತಿರುವ ಒತ್ತಾಯಕ್ಕೆ ಕೇಂದ್ರ ಸರ್ಕಾರ ಮಣಿಯಬಾರದು. ಎಲ್ಲಿಯವರೆಗೆ ಯಾವುದೇ ಪ್ರಾಣಿ ಅಥವಾ ಮನುಷ್ಯರಿಗೆ ತೊಂದರೆಯಾಗುವುದಿಲ್ಲವೋ ಅಲ್ಲಿಯವರೆಗೆ ಪರಂಪರೆಯೇನೋ ಸರಿ. ಜಲ್ಲಿಕಟ್ಟು ಈ ಅಂಶವನ್ನು ಹೊಂದಿಲ್ಲ. ಮನುಷ್ಯನಲ್ಲಿರಬಹುದಾದ ಅತಿಮಾನುಷ್ಯತೆಯನ್ನು ಅದು ಅಭಿವ್ಯಕ್ತಗೊಳಿಸುತ್ತದೆ. ಕ್ರೌರ್ಯದ ಪರಮಾವಧಿಯಾಗಿದೆ. ಅಂಥ ಕ್ರೌರ್ಯದ ಪರಂಪರೆಯನ್ನು ಪುನರ್‌ಜ್ಜೀವಿತಗೊಳಿಸುವ ಬದಲು ತಮಿಳುನಾಡು ಸರ್ಕಾರವು ಸುಪ್ರೀಂಕೋರ್ಟಿನ ಆದೇಶವನ್ನು ಪಾಲಿಸಬೇಕು. ಜನರಿಗೆ ಶಿಕ್ಷಣ ಕೊಡುವುದರ ಮೂಲಕ ಜಲ್ಲಿಕಟ್ಟಿನಲ್ಲಿರುವ ಮಾನವ ಕ್ರೌರ್ಯದ ಬಗ್ಗೆ ಜಾಗೃತಿ ಮೂಡಿಸಬೇಕು. ಯಾವುದೇ ನಾಗರೀಕ ಸಮಾಜದಲ್ಲಿ ಮನುಷ್ಯರಿಗಾಗಲಿ ಅಥವಾ ಪ್ರಾಣಿಗಳಿಗಾಗಲಿ ಹಿಂಸೆ ಕೊಡುವುದಕ್ಕೆ ಅವಕಾಶವಿಲ್ಲ.

–ಡೆಕನ್ ಹೆರಾಲ್ಡ್ ಸಂಪಾದಕೀಯ

ದೇಶದಲ್ಲಿ ಮೂವತ್ತು ಲಕ್ಷ ಸರ್ಕಾರೇತರ ಸಂಸ್ಥೆಗಳಿವೆ. ದೇಶ ಮತ್ತು ವಿದೇಶದ ಸರ್ಕಾರಗಳಿಂದ ಅವು ಹೇಳಿಕೊಳ್ಳುವ ಸಮಾಜ ಸೇವಾ ಕೆಲಸಗಳಿಗಾಗಿ ದೊಡ್ಡ ಪ್ರಮಾಣದಲ್ಲಿ ಹಣ ಪಡೆಯುತ್ತವೆ. ಇವುಗಳ ಲೆಕ್ಕಪತ್ರವನ್ನು ಆಡಿಂಟ್ ಮಾಡಬೇಕೆಂದು ಸುಪ್ರೀಂಕೋರ್ಟ್ ಆದೇಶಿಸಿದೆ. ದೇಶದಲ್ಲಿ ಅನೇಕ ಜನರು ಜೀವನ ನಿರ್ವಹಣೆಗಾಗಿ ಹೋರಾಟ ಮಾಡುತ್ತಿರುವಾಗ ಸರ್ಕಾರೇತರ ಸಂಸ್ಥೆಗಳು ಸೇವೆ ಹೆಸರಿನಲ್ಲಿ ಹಣದ ದುರುಪಯೋಗ ಮತ್ತು ದುಂದುವೆಚ್ಚ ಮಾಡುತ್ತಿರುವುದು ಆಘಾತಕಾರಿ ಸಂಗತಿ. ಸ್ವಯಂ ಸೇವಾ ಸಂಸ್ಥೆಗಳು ತೆರಿಗೆಯ ಜಾಲದಿಂದ ತಪ್ಪಿಸಿಕೊಳ್ಳಲಾಗದಂತ ಕಾನೂನು ಮಾಡುವುದು ಅಗತ್ಯವಿದೆ.

–ಚಿದಂಬರ ಸೇ ಅಯ್ಯರ್

ಜನಪದ ಸೇವಾ ಟ್ರಸ್ಟ್ ಸಮಾಚಾರ

ವೈವಾಹಿಕ ಜೀವನದಲ್ಲಿ ಹೊಂದಾಣಿಕೆಯಾಗದ್ದರಿಂದ ಮನೆ ಬಿಟ್ಟು ಬಂದಿದ್ದ ಮಹಿಳೆಗೆ ಟ್ರಸ್ಟ್ ಆಶ್ರಯ ನೀಡಿ ಪುನಃ ಅವಳ ಸಂಬಂಧಿಕರೊಂದಿಗೆ ಕಳುಹಿಸಿತು

***

ಜನಪದ ಸೇವಾಟ್ರಸ್ಟ್ ದತ್ತು ಕೇಂದ್ರದ ಮೂಲಕ ದತ್ತು ಪಡೆದವರ ಮತ್ತು ದತ್ತು ಹೋದ ಮಕ್ಕಳ ಸ್ನೇಹ ಮಿಲನವು ಪ್ರತಿವರ್ಷದಂತೆ ಕಳೆದ ಜನವರಿ ೮ ರಂದು ಹೊಸ ಜೀವನದ ದಾರಿ ಕೇಂದ್ರದಲ್ಲಿ ನಡೆಯಿತು. ಕೆಲವರು ದೂರದ ಪ್ರದೇಶದಲ್ಲಿದ್ದುದರಿಂದ ಅವರಿಗೆ ಸಮಾವೇಶಕ್ಕೆ ಬರಲಾಗಲಿಲ್ಲ ಸುಮಾರು ೧೫ ಜನ ದಂಪತಿಗಳು ತಮ್ಮ ದತ್ತು ಮಗುವಿನೊಂದಿಗೆ ಭಾಗವಹಿಸಿದ್ದರು. ಕಾರ್ಯಕ್ರಮ ಖಾದಿ ನೇಯ್ಗೆ ಕೇಂದ್ರದ ಮಹಿಳೆಯರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ದತ್ತು ಕೇಂದ್ರ ಪ್ರಾರಂಭವಾಗಿನಿಂದ ಇದುವರೆಗಿನ ಹಾಗುಹೋಗುಗಳನ್ನು ಸಂತೋಷ್ ಕೌಲಗಿಯವರು ತಿಳಿಸುತ್ತಾ ಎಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸಿದರು. ಮಂಡ್ಯದ ನಗರದಲ್ಲಿದ್ದುಕೊಂಡು ಸಂಗೀತ ಕ್ಷೇತ್ರದಲ್ಲಿ ಸೇವೆ ಮಾಡುತ್ತಿರುವ ಶ್ರೀ ವಿದ್ಯಾಶಂಕರ್ ರವರಿಂದ ಗಾಯನ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಯಾಗಿ ಬಂದಿದ್ದ ಪ್ರಜಾವಾಣಿ ದಿನಪತ್ರಿಕೆಯ ಉಪಸಂಪಾದಕ ಮಂಡಳಿಯ ಹಿರಿಯ ಸದಸ್ಯರಾದ ಶ್ರೀ ರವೀಂದ್ರ ಭಟ್ ರವರು 'ವೈವಾಹಿಕ ಜೀವನದಲ್ಲಿ ಹೊಂದಾಣಿಕೆಯಾಗದ್ದರಿಂದ ಮನೆ ಬಿಟ್ಟು ಬಂದಿದ್ದ ಮಹಿಳೆಗೆ ಟ್ರಸ್ಟ್ ಆಶ್ರಯ ನೀಡಿ ಪುನಃ ಅವಳ ಸಂಬಂಧಿಕರೊಂದಿಗೆ ಕಳುಹಿಸಿತು "ಯಶಸ್ವಿ ಪೋಷಕರಾಗುವುದು ಹೇಗೆ" ಎಂಬ ವಿಷಯವಾಗಿ ವಿಶೇಷ ಉಪನ್ಯಾಸಕೊಟ್ಟರು. ಭಟ್ಟರ್ ರವರ ಉಪನ್ಯಾಸ ಬಹಳ ಬೋಧಪ್ರದವಾಗಿತ್ತು. ಹಾಸ್ಯ ಮಿಳಿತವು ಆಗಿತ್ತು. ಸಭೀಕರೆಲ್ಲರೂ ಅವರ ಉಪನ್ಯಾಸದಿಂದ ಸಂತೋಷಗೊಂಡರು ನಂತರ ಅವರ ಶ್ರೀಮತಿ ದೀಪಾರವರು ಕೂಡ ತಮ್ಮ ಕಿವುಡು ಮಗನ ಬೆಳವಣಗೆಗಾಗಿ ತಾವು ಮಾಡಿದ ಮತ್ತು ತಮ್ಮ ಪತಿಯ ಪ್ರಯತ್ನವನ್ನು ಮನದಟ್ಟಾಗುವಂತೆ ಹೇಳಿದರು. ಕೊನೆಯದಾಗಿ ಅವರ ಮಗ ತನಗೆ ತನ್ನ ತಂದೆ-ತಾಯಿ ತೋರಿಸಿದ ಪ್ರೀತಿ ವಾತ್ಸಲ್ಯದ ಬಗ್ಗೆ ಹೇಳಿದ. ಆನಂತರ ದತ್ತು ತೆಗೆದುಕೊಂಡ ತಂದೆ ತಾಯಂದಿರು ತಮ್ಮ ಅನುಭವಗಳನ್ನು ಹೇಳಿದರು. ಎಲ್ಲರು ತಮ್ಮ ಜೀವನದಲ್ಲಿ ಉಂಟಾಗಿರುವ ಸಂತೋಷದ ವಿಚಾರಗಳನ್ನು ತಿಳಿಸಿದರು. ದತ್ತು ಹೋದ ಕೆಲವು ಮಕ್ಕಳು ಹಾಡು ಹೇಳಿದರು ಮತ್ತು ಚಿತ್ರಗಳನ್ನು ಬರೆದು ತೋರಿಸಿದರು. ಮಂಡ್ಯ ಜಿಲ್ಲಾ ಸಾಂಸ್ಥಿಕ ಮಕ್ಕಳ ರಕ್ಷಣಾಧಿಕಾರಿಯಾದ ಕುಮಾರಿ ನಳಿನಾ ಸಭೆಯಲ್ಲಿ ಮಾತನಾಡಿ ಟ್ರಸ್ಟಿನ ದತ್ತು ಕೇಂದ್ರದ ನಿರ್ವಹಣೆ ಬಗ್ಗೆ ಮತ್ತು ಕಾರ್ಯಕ್ರಮದ ಬಗ್ಗೆ ತಮ್ಮ ಮೆಚ್ಚುಗೆಯನ್ನು ಹೇಳಿದರು. ಅಧ್ಯಕ್ಷರಾದ ಶ್ರೀ ಎಸ್. ಜನಾರ್ಧನ್‌ರವರು ದತ್ತು ಕೇಂದ್ರದ ಬೆಳವಣಿಗೆಗಾಗಿ ಎಲ್ಲರ ಸಹಕಾರವನ್ನು ಕೋರಿದರು. ಕೊನೆಯಲ್ಲಿ ಸಾಮೂಹಿಕ ಭೋಜನ ನಂತರ ಸ್ನೇಹ ಮಿಲನದ ಕಾರ್ಯಕ್ರಮ ಕೊನೆಗೊಂಡಿತ್ತು.

ಮುಸ್ಸಂಜೆಯು ಬೆಳಕಿನಲ್ಲಿ....ತ

– ಸುರೇಂದ್ರ ಕೌಲಗಿ

ಯಾರಾದರೂ ಆತ್ಮೀಯರು ಬಂದರೆ ಮತ್ತು ದೂರವಾಣಿ ಮೂಲಕ ಮಾತನಾಡಿದರೆ ಕೆಲಹೊತ್ತಾದರೂ ಸಂತೋಷದ ತೊರೆ ಹರಿಯುತ್ತದೆ. ಆ ಹೊತ್ತಿನಷ್ಟು ಮಟ್ಟಿಗಾದರೂ ವಯಸ್ಸು ಹಿಮ್ಮೆಟ್ಟಿದಂತೆ ಅನಿಸುತ್ತದೆ.

ಸ್ವತಃ ಓಡಾಡಲು ಅಥವಾ ಹೊರ ಊರುಗಳಿಗೆ ಪ್ರಯಾಣ ಮಾಡಲು ಶರೀರ ಅನುಮತಿ ಕೊಡದೇ ಇರುವಂಥ ಪರಿಸ್ಥಿಯಲ್ಲಿರುವಾಗ ಆತ್ಮೀಯರ ಖುದ್ದು ಬರುವಿಕೆ, ಅವರ ಭೇಟಿ, ಅವರೊಂದಿಗಿನ ಮಾತುಕತೆ ಎಲ್ಲವೂ ಶರೀರಕ್ಕೂ ಮನಸ್ಸಿಗೂ ಪೌಷ್ಠಿಕ ಆಹಾರ ಒದಗಿಸಿಕೊಡುತ್ತವೆ. ಅಂಥ ಸಂದರ್ಭಗಳು ಹೆಚ್ಚಾಗಲೆಂದು ಬಯಸುತ್ತೇನೆ. ಆತ್ಮೀಯರ ಇಂಥ ಭೇಟಿಯ ಸಂದರ್ಭ ಸಿಹಿ–ಕಹಿ ಘಟನೆಗಳ ನೆನೆಪಿನ ಸುರಳಿ ಬಿಚ್ಚುವುದಕ್ಕೆ ಕಾರಣವಾಗುತ್ತದೆ.

ಅಂಥ ಒಂದು ಇತ್ತೀಚಿನ ಆತ್ಮೀಯ ಭೇಟಿ ಶ್ರೀ ಎಸ್. ಪ್ರಾಣೇಶ್ ಮತ್ತು ಸಂಧ್ಯಾ ಅವರದು. ಜಕ್ಕನಹಳ್ಳಿ ಮಾರ್ಗವಾಗಿ ಹೋಗುವಾಗಿನ ತಮ್ಮ ಪ್ರಯಾಣದ ಸಂದರ್ಭದಲ್ಲಿ ಮೇಲುಕೋಟೆಗೂ ಬಂದು ನನ್ನನ್ನು ಭೇಟಿ ಮಾಡಿದರು. ಅದು ನನ್ನ ಮಟ್ಟಿಗೆ ಅವರ ಪೂರ್ವಯೋಜಿತ ಭೇಟಿಯಾಗಿರಲಿಲ್ಲ. ಭೇಟಿಗೆ ಬರುವುದಾಗಿ ದೂರವಾಣಿ ಮೂಲಕ ತಿಳಿಸಿ ಬಂದವರು.

ಶ್ರೀ ಪ್ರಾಣೇಶ್ ಅವರು ಜನಪದ ಸೇವಾ ಟ್ರಸ್ಟಿನ ಸದಸ್ಯರಾಗಿಯೂ ಕೆಲಸ ಮಾಡಿದವರು ಸಂಸ್ಥೆಯ ಬೆಳವಣಿಗೆಗೆ ಸಹಾಯ ಮಾಡಿದವರು. ಮಗ ಶ್ರೀರಾಮ್ ಜನ್ಮತಾಳುವ ಮೊದಲಿನಿಂದಲೂ ಟ್ರಸ್ಟಿನೊಂದಿಗೆ ಸಂಪರ್ಕವಿರಿಸಿಕೊಂಡವರು. ಈಗ ಶ್ರೀರಾಮನಿಗೆ ಇಪ್ಪತ್ತಾರು ವರ್ಷವಾಗಿರಬಹುದು. ಗಿರಿಜಮ್ಮನವರು ತೀರಿಕೊಂಡಾಗಲೂ ಬಂದು ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದವರು. ಪ್ರಾಣೇಶ್ ತುಮಕೂರು ಜಿಲ್ಲೆಯ ಸಿರಿವರ ಎಂಬ ಪುಟ್ಟ ಗ್ರಾಮದ ಮೂಲದವರು ಅಂತಲೇ ಎಸ್. ಪ್ರಾಣೇಶ್ ಎಂದೇ ಪ್ರಸಿದ್ಧವಾದವರು. ಅವರ ಪ್ರಸಿದ್ಧಿಗೆ ಕಾರಣ ಪ್ರಿಜಂ ಎಂಬ ಹೆಸರಿನ ಪ್ರಕಟಣಾಲಯ. ಪ್ರಿಜಂ ಮೂಲಕ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಅನೇಕ ಉಪಯುಕ್ತ ಗ್ರಂಥಗಳನ್ನು ತಾಂತ್ರಿಕ ಪಠ್ಯಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಕನ್ನಡ ನಾಡಿನ ಹಿರಿಯರಾಗಿದ್ದ ನಿಟ್ಟೂರು ಶ್ರೀನಿವಾಸ್ ರವರ ಜೀವನ ವೃತ್ತಾಂತವನ್ನು ಅವರಿಂದಲೇ ಹೇಳಿಸಿ ಪ್ರಕಟಿಸಿದ್ದಾರೆ. ಪ್ರಿಜಂ ಹೆಸರಿನಲ್ಲಿ ಇಂಗ್ಲೀಷ್, ಕನ್ನಡ ಶಬ್ದಕೋಶವನ್ನು ಸಹ ಪ್ರಕಟಿಸಿದ್ದಾರೆ. ಪುಸ್ತಕಗಳ ಪ್ರಕಟಣೆಯ ಜೊತೆಗೆ ಶ್ರೀ ಪ್ರಾಣೇಶ್ ಅವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಅಪಾರ

ಆಸಕ್ತಿ ಇದೆ. ಆದ್ದರಿಂದ ಶಾಲಾ ಅಧ್ಯಾಪಕರನ್ನು ತಮ್ಮ ಪ್ರಕಟಣಾಲಯದ ಆವರಣಕ್ಕೆ ಬರಮಾಡಿಕೊಂಡು ಶಿಕ್ಷಣ ವಿಚಾರವಾಗಿ ವಿಚಾರ ಗೋಷ್ಠಿಗಳನ್ನು ನಡೆಸುತ್ತಾರೆ. ಆ ಗೋಷ್ಠಿಗಳಲ್ಲಿ ವಿಚಾರ ಮಂಥನದಿಂದ ಮೂಡಿ ಬಂದ ಅಭಿಪ್ರಾಯಗಳ ಮೇರೆಗೆ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಉಪಯುಕ್ತವಾಗುವಂಥ ಪುಸ್ತಕಗಳನ್ನು ಪ್ರಕಟಿಸುತ್ತಾರೆ. ಅವರ ಈ ಮಾದರಿಯ ಕಾರ್ಯಕ್ಷೇತ್ರ ನೆರೆರಾಜ್ಯಗಳವರೆಗೂ ಹಬ್ಬಿದೆ. ಅಲ್ಲದೆ ಸಿರಿವರ ಗ್ರಾಮದಲ್ಲಿ ಕೂಡ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಶ್ರೀ ಪ್ರಾಣೇಶ್‌ರವರ ಎಲ್ಲ ಕೆಲಸಗಳಲ್ಲಿ ಸಂಧ್ಯಾ ಬೆಂಬಲವಾಗಿ ಇದ್ದಾರೆ. ವಿ-ರಸಕ್ಕಿಂತ ಸ-ರಸತೆಗೆ ಹೆಚ್ಚು ಮಹತ್ವ ಕೊಡುವ ಎಸ್. ಪ್ರಾಣೇಶ್ ಅನೇಕರ ಆತ್ಮೀಯ ಮಿತ್ರರಾಗಿರುವುದಕ್ಕೆ ಆಶ್ಚರ್ಯವೇನಿಲ್ಲ. ಸಂಧ್ಯಾ ಮತ್ತು ಪ್ರಾಣೇಶ್ ದಂಪತಿಗಳಿಗೆ ನನ್ನ ಆತ್ಮೀಯ ಶುಭಾಶಯಗಳು. ಅವರು ಆಗಾಗ್ಗೆ ಬಂದು ಸಂತಸ ನೀಡುವಂತಾಗಲೆಂದು ಬಯಸುತ್ತೇನೆ.

ಹಳೆಯ ವರ್ಷ ಮುಗಿದು ಹೊಸ ವರ್ಷ ಪ್ರಾರಂಭವಾಯಿತು. ಹಳತು ಹೋಗಿ ಹೊಸತು ಬರುವ ಕಾಲಘಟ್ಟಕ್ಕೆ ಕಳೆದ ೮೩ ವರ್ಷಗಳಿಂದ ಸಾಕ್ಷಿಯಾಗಿ ಬಂದಿದ್ದೇನೆ. ಕಳೆದ ವರ್ಷಗಳೆಲ್ಲ ನನಗೆ ಯಾವುದೇ ರೀತಿಯ ನಿರಾಶೆಗೆ ಕಾರಣವಾಗಿಲ್ಲ. ಬದಲಿಗೆ ಸುತ್ತಲಿನ ಜನಜೀವನದಲ್ಲಿ ಹೊಸತನ್ನು ಕಾಣುವ ತವಕ ಇದೆ. ಹಳತಿನ ಮುಕ್ತಾಯದಲ್ಲಿಯೇ ಹೊಸತನದ ಉಗಮ ಮತ್ತದರ ಮುಕ್ತಾಯದಲ್ಲಿಯೇ ಹೊಸತನ. ಹೀಗೆ ಕಾಲಪ್ರವಾಹ ಹರಿಯುತ್ತಿರುವಾಗ ವರ್ಷ ಕಳೆದು ಹೊಸ ವರ್ಷ ಪ್ರಾರಂಭವಾದಾಗ ಎಲ್ಲವು ಸಹಜವೆನಿಸಿತು. ಸುತ್ತಲೂ ಒಳ್ಳೆಯ ಮತ್ತು ಅರ್ಥಪೂರ್ಣ ಘಟನೆಗಳು ನಡೆಯುತ್ತಿದ್ದರೆ ಮುಸ್ಸಂಜೆಯ ಬೆಳಕು ಹೆಚ್ಚು ಪ್ರಕಾಶಮಾನವಾಗಿರುವಂತೆ ಅನಿಸುತ್ತದೆ.

ಎಲ್ಲಿಯೋ, ಯಾರ ತಪ್ಪಿನಿಂದಲೋ, ಅನಾಥವಾಗಿ ಬಿದ್ದ ಮಗುವೊಂದು ಜನಪದ ಸೇವಾಟ್ರಸ್ಟಿನ ಆಶ್ರಯಕ್ಕೆ ಬಂದು ಅಲ್ಲಿ ರಕ್ಷಣೆ, ಪೋಷಣೆ ಪಡೆದು ಇನ್ನು ಯಾರದೋ ಮಡಿಲಿಗೆ ಹೋಗಿ ತನ್ನ ಪ್ರಕೃತಿದತ್ತ ಸಾಮರ್ಥ್ಯಗಳೊಂದಿಗೆ ಒಳ್ಳೆಯ ಮಾನವನಾಗಿ ಬೆಳೆಯುತ್ತಿರುವುದನ್ನ ನೋಡುವ ಸದಾವಕಾಶ ದೊರೆಯುತ್ತಿರುತ್ತದೆ. ಆಗ ಜೀವನ ಬರಡಲ್ಲ ಮಾನವೀಯತೆಯ ಸ್ತೋತ್ರ ಅವಕಾಶ ಸಿಕ್ಕಾಗ ಚಿಮ್ಮುತ್ತದೆ. ಎಂದೆನಿಸುತ್ತದೆ.

ಮನಸ್ಸಿಗೆ ಸಂತೋಷ ಕೊಡುತ್ತಿರುವ ಇನ್ನೊಂದು ಸಂಗತಿ ಮೊಮ್ಮಕ್ಕಳ ಪ್ರಗತಿ. ಐದು ಜನ ಮೊಮ್ಮಕ್ಕಳೂ ಒಂದೊಂದು ಕ್ಷೇತ್ರದಲ್ಲಿ ಮುಂದುವರಿಯುತ್ತಿರುವುದನ್ನು ನೋಡುವುದೇ ಒಂದು ಸಂತಸ. ಸಂತಸಕ್ಕೆ ವಿಶೇಷ ಕಾರಣವೆಂದರೇ ನನ್ನ ಸ್ವಂತ

ಮಕ್ಕಳು ತನ್ನ ಕೈಗೆ ಬಂದಿರುವುದರ ಜೊತೆಗೆ ಅವರ ಮಕ್ಕಳು ಅವರ ಕೈಗೆ ಬಂದಿರುವುದರ ಜೊತೆಗೆ ನನ್ನ ಕೈಗೂ ಬಂದಿರುವುದು. ಹಿರಿಯ ಮೊಮ್ಮಗ ಸುಮಾನಸ್ ಈಗ ಇಂಗ್ಲೆಂಡಿನಲ್ಲಿರುವ ಸಕ್ಸಸ್ ವಿಶ್ವವಿದ್ಯಾಲಯದಲ್ಲಿ ಪರಿಸರ, ಖಾದಿ ಹಾಗೂ ಸುಸ್ಥಿರ ಬದುಕು ಎಂಬ ವಿಷಯವಾಗಿ ಪಿ.ಎಚ್.ಡಿ ಮಾಡುತ್ತಿದ್ದಾನೆ. ಆಗಾಗ್ಗೆ ದೂರವಾಣಿಯ ಮೂಲಕ ಮಾತನಾಡಿ ತನ್ನ ವಿದ್ಯಾಭ್ಯಾಸದ ಪ್ರಗತಿ ಬಗ್ಗೆ ತಿಳಿಸುತ್ತಾನೆ ಹಾಗೂ ನನ್ನ ಯೋಗಕ್ಷೇಮ ಕೇಳತ್ತಾನೆ. ಮೊಮ್ಮಗಳು ಸುಹಾಸಿನಿ ಭರತನಾಟ್ಯ ಕಲಿತು ಅಲ್ಲಲ್ಲಿ ಸಾರ್ವಜನಿಕ ಪ್ರದರ್ಶನಗಳನ್ನು ಕೊಟ್ಟು ಜನ ಮನ್ನಣೆ ಪಡೆಯುತ್ತಿದ್ದಾಳೆ. ಇತ್ತೀಚೆಗೆ ಅವಳಿಗೆ ಹಂಪಿ ಉತ್ಸವದಲ್ಲಿ ಭಾಗಿಯಾಗಲು ಅವಕಾಶ ಸಿಕ್ಕಿತ್ತು. ಬೇಲೂರು ಶ್ರೀ ಚೆನ್ನಕೇಶವ ದೇವಾಲಯದ ಶಿಲಾಬಾಲಕೆಯರ ನಾಡಿನಲ್ಲಿಯೂ ನೃತ್ಯ ಮಾಡುವ ಅವಕಾಶ ಒದಗಿತ್ತು. ಇನ್ನೋರ್ವ ಮೊಮ್ಮಗ ಸುಪ್ರಜ್ ಹೋಮಿಯೋಪತಿ ವೈದ್ಯ ಶಾಸ್ತ್ರವನ್ನು ಯಶಸ್ವಿಯಾಗಿ ಪೂರೈಸುತ್ತಿದ್ದಾನೆ. ಇನ್ನೋರ್ವ ಮೊಮ್ಮಗಳಾದ ಗೌರಿ. ಪ್ರಾಥಮಿಕ ಶಾಲೆಯಲ್ಲಿ ವ್ಯಾಸಾಂಗ ಮಾಡುತ್ತಿದ್ದಾಳೆ. ಅವಳು ದಿನಚರಿ ಬರೆಯುವ ಅಭ್ಯಾಸಬೆಳೆಸಿಕೊಳ್ಳುತ್ತಿದ್ದಾಳೆ. ಹೊಸ ವರ್ಷದಿಂದಲೇ ದಿನಚರಿ ಬರೆಯಲು ಪ್ರಾರಂಭಿಸಿದ್ದಾಳೆ. ಅದನ್ನು ತಿಳಿದು ಬಹಳ ಸಂತೋಷವಾಯಿತು. ಕುತೂಹಲಕ್ಕಾಗಿ ದಿನಚರಿಯ ಯಾವುದಾದರೂ ಭಾಗವನ್ನು ಓದಲು ಹೇಳಿದೆ ಅವಳಿಗೆ. ಆಗ ಅವಳು ೨೦೧೭ ಜನವರಿ ೧ ನೇ ತಾರೀಖಿನ ದಿನ ಬರೆದ ದಿನಚರಿಯಲ್ಲಿಯ ಮಾತುಗಳನ್ನು ಓದಿದಳು ಅವು ಹೀಗಿದ್ದವು, “ಇದು ನನ್ನ ಮೊದಲ ದಿನಚರಿ ಈ ದಿನ ಹೊಸ ವರ್ಷದ ಮೊದಲ ದಿನ. ನಿನ್ನೆ ರಾತ್ರಿ ಎಲ್ಲರೂ ಮಧ್ಯರಾತ್ರಿವರೆಗೂ ಎದ್ದಿದ್ದು ಒಬ್ಬರಿಗೊಬ್ಬರು ಹೊಸವರ್ಷದ ಶುಭಾಶಯ ಹೇಳಿದೆವು. ಬೆಳಗ್ಗೆ ಎದ್ದಾಗ ಅಮ್ಮ ಶುಭಾಶಯ ಹೇಳುತ್ತಾ ಬಿಸಿ ಬಿಸಿ ಇಡ್ಲಿ ಮತ್ತು ಸಜ್ಜಿಗೆ ಕೊಟ್ಟಳು” ಅವಳಿಗೆ ದಿನಚರಿ ಬರೆಯುವ ಅಭ್ಯಾಸ ಬೆಳೆಸಿಕೊಳ್ಳಲು ಹೇಳಿದೆ. ನಾಲ್ಕು ವರ್ಷದ ಮೊಮ್ಮಗನಾದ ಸಮೀಪ ಚೇಷ್ಠೆ ಮತ್ತು ತುಂಟಾಟಗಳ ಮೂಲಕ ಸಾಮಾನ್ಯ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದಾನೆ. ಈ ರೀತಿ ಮುಸ್ಸಂಜೆಯ ಬೆಳಕು ಕೆಲವೊಂದು ಸಲ ದಿವ್ಯವಾಗಿಯೂ ಭವ್ಯವಾಗಿಯೂ ಕಾಣುತ್ತದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

<u>ನವೀಕರಿಸಿದ ಚಂದಾದಾರರು</u>

ಶ್ರೀಮತಿ ವಿಶಾಲಾಕ್ಷಿಶರ್ಮ – ಬೆಂಗಳೂರು
ಮಹಾಜನ ಪ್ರಥಮ ದರ್ಜೆ ಕಾಲೇಜು – ಮೈಸೂರು
ಶ್ರೀ ಕೆ. ವೆಂಕಟರಾಜು – ಚಾಮರಾಜನಗರ

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ"

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ



KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237